ಅಚಲ

ಮಾರ್ಚ್ 8, 1989 ಬೆಲೆ: ರೂ. 1-50

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರದ ದ್ವೈಮಾಸಿಕ



ಸಂಪುಟ ೫ ಸಂಚಿಕೆ ೧

'ಅಚಲ' ಪತ್ರಿಕೆಯನ್ನು ಪಡೆಯಬಯಸುವವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ಹತ್ತು ರೂಪಾಯಿಗಳನ್ನು ಎಂ.ಓ./ಡ್ರಾಫ್ಟ್ ಮೂಲಕ ಕಳುಹಿಸಿ.
ಕೂಪನ್‌ನಲ್ಲಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸ ಬದಲಾದರೆ ಕೂಡಲೇ ಕಾರ್ಡಿನಲ್ಲಿ ಬರೆದು ತಿಳಿಸಬೇಕು.

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
221, 4ನೇ ಮೈನ್, ವೈಯಾಳಿಕಾವಲ್
ಬೆಂಗಳೂರು–560 003.

ಸಂಪಾದಕ ಮಂಡಳಿ

ಎನ್. ಗಾಯತ್ರಿ, ದೇವಿ, ಭಾರತಿ ಕಿನ್ನಾಳ್, ನೇಮಿಚಂದ್ರ

ಕಲೆ : ವೆಂಕಟಾಚಲಪತಿ

ಪ್ರಸಾರ : ಎನ್. ಶಾಂತಾ

ಚಂದಾ ವಿವರ

ವಾರ್ಷಿಕ ಚಂದಾ	:	ರೂ.	10–00
ಬಿಡಿ ಪ್ರತಿ	:	ರೂ.	1–50
ವಿಶೇಷ ಪ್ರತಿ	:	ರೂ.	2–50
ಆಜೀವ ಚಂದಾ	:	ರೂ.	100–00

Printed at PRINTSWELL, 78, 2nd Main Road
Nagappa Block, Srirampuram, Bangalore-21 &
Published by Dr. G. Ramakrishna on behalf of
Jagruthi Mahila Adhyayana Kendra
221, IV Main, Vyalikaval, Bangalore-560 003.

Editor : N. GAYATRI

ಆತ್ಮೀಯ ಸಂಗಾತಿಗಳಿಗೆಲ್ಲ ಮಹಿಳಾ ದಿನದ ಶುಭಾಶಯಗಳು.
ಬದಲಾದ ಹೆಸರುಗಳೊಂದಿಗೆ ಈ ಪತ್ರಿಕೆ ನಾಲ್ಕನೇ ವರ್ಷವನ್ನು ಯಶಸ್ವಿಯಾಗಿ ಮುಗಿಸಿ ಐದನೇ ವರ್ಷಕ್ಕೆ ಕಾಲಿಡುತ್ತಿದೆ. ಈ ಪತ್ರಿಕೆಯನ್ನು ಹೀಗೆ ಬೆಳೆಸಿಕೊಂಡು ಹೋಗಲು, ಇನ್ನಷ್ಟು ಸತ್ವಯುತವಾಗಿಸಲು ನಿಮ್ಮೆಲ್ಲರ ಸಹಕಾರ ಅಗತ್ಯ.

ಪುಸ್ತಕ ವಿಮರ್ಶೆಗಾಗಿ ಪುಸ್ತಕ ಕಳುಹಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.

ಒಳಗೇನಿದೆ....

ಸ್ತ್ರೀ ಪ್ರತ್ಯೇಕತೆಯೆಂಬ ದೌಷ್ಟ್ಯ
—ಡಾ॥ ಅನುಪಮಾ ನಿರಂಜನ

ಊರ್ಮಿಳಾ (ಕತೆ)
—ಭಾರತಿ ಕಿನ್ನಾಳ್

ಮೇರಿ ವುಲ್‌ಸ್ಟನ್ ಕ್ರಾಫ್ಟ್–ಒಂದು ಪರಿಚಯ
—ಡಾ. ಜಿ. ರಾಮಕೃಷ್ಣ

ಈ ಹುಡುಗಿಯರು (ಕವನ)
—ಶಾಂತಾ ನಾಗರಾಜ್

ಅತ್ಯಾಚಾರಿಯ ಪತ್ತೆಗೆ ಡಿ ಎನ್.ಎ. ಬೆರಳಚ್ಚು ತಂತ್ರ
—ನೇಮಿಚಂದ್ರ

ಮಹಿಳಾ ದಿನದಂದು.......

ಎಂದಿನಂತೆ ಮಾರ್ಚ್ ಬಂತೆಂದರೆ ಮಹಿಳಾ ದಿನದ ನೆನಪು ಸುಳಿಯುತ್ತದೆ. ಸಂಬಂಧಪಟ್ಟವರಿಗೆ ಆಚರಣೆಯು, ಸಂಭ್ರಮದ ವಿಷಯವೂ ಆಗುತ್ತದೆ. ಹಾಗೆಯೇ ಮಹಿಳೆಯ ಸ್ವಂತಿಕೆಯನ್ನು ಒಪ್ಪಿಕೊಳ್ಳಲಾಗದವರಿಗೆ, ಅಪಹಾಸ್ಯ ಮಾಡುವವರಿಗೆ ಕುಹಕ ಮಾಡಲು ನೆಪವೊಂದು ಸಿಕ್ಕುತ್ತದೆ. ಯಾವುದೇ ಕಾರಣಕ್ಕೆ ಮಹಿಳೆಯ ಧ್ವನಿ ಜೋರಾಗಲಿ, 'ಇದು ಮಹಿಳಾ ಕೂಗು, ಎನ್ನುವ, 'ಮಾರ್ಚ್ ಜ್ವರ' ಎಂದು ಛೇಡಿಸುವ ಧ್ವನಿಗಳಿಗೇನೂ ಕಡಿಮೆಯಿಲ್ಲ. ಮತ್ತೂ ವಿಶೇಷವೆಂದರೆ ಪ್ರಜ್ಞಾವಂತರೆನಿಸಿಕೊಂಡ ಸ್ತ್ರೀಯರೂ ಕೂಡ 'ಯಾರೋ ಹೇಳಿದ್ದಕ್ಕೆಲ್ಲ ಕುರಿಯಂತೆ ಬಾಗಿ ಬಾವುಟ ಹಿಡಿದು, ಪ್ಲೆಕಾರ್ಡ್ ಹಿಡಿದು ಮೆರವಣಿಗೆ ಹೋದರೆ, ರಸ್ತೆಯಲ್ಲಿ ಅರಚಾಡಿದರೆ, ರಾಷ್ಟ್ರೀಯ ಮಟ್ಟದ ಸಮ್ಮೇಳನಗಳಲ್ಲಿ ಭಾಗವಹಿಸಿ ಪುರುಷನ ದಬ್ಬಾಳಿಕೆಯ ವಿರುದ್ಧ ಚೀರಾಡಿದರೆ ನಾವು ಇನ್ನಷ್ಟು ಅಪಹಾಸ್ಯಕ್ಕೆ ಗುರಿಯಾಗುತ್ತೇವೆ' ಎಂದು ಮಹಿಳಾ ಚಳುವಳಿಗೆ ವ್ಯಾಖ್ಯಾನ ಬರೆಯುವಂತಹವರೂ ಇರುತ್ತಾರೆ.

ಇಂತಹ ಸಂದರ್ಭಗಳೆಲ್ಲಾ ಮಹಿಳಾ ಪ್ರಶ್ನೆಯ ಬಗ್ಗೆ, ಮಹಿಳಾ ಚಳುವಳಿಯ ಬಗ್ಗೆ ಮತ್ತೆ ಮತ್ತೆ ಚಿಂತಿಸುವಂತೆ ಮಾಡಿ ನಮ್ಮ ಅಭಿಪ್ರಾಯಗಳನ್ನು ಗಟ್ಟಿಗೊಳಿಸಲು ನೆರವಾಗುತ್ತದೆ. ಗಂಡಸು ಮಾಡಿದ್ದನೆಲ್ಲಾ, ಗಂಡಸು ಪಡೆದುಕೊಂಡಿರುವುದನ್ನೆಲ್ಲಾ ಹಾಗೂ ಅವರಿಗೆ ಆದರ್ಶವಾಗಿರುವುದೆಲ್ಲಾ ಹೆಣ್ಣಿಗೂ ದಕ್ಕಬೇಕು — ಎಂಬುದು ಹೆಣ್ಣಿನ ಸ್ವಾತಂತ್ರ್ಯ, ಸಮಾನತೆಯ ಪರಿಕಲ್ಪನೆಯಲ್ಲಿ ಸುಳಿಯಲೇಬಾರದು. ಹಾಗೆಂದಾಗ ಅನೇಕ ತಲೆಮಾರುಗಳಿಂದ ಕಳೆದುಕೊಂಡ ಸ್ವಂತಿಕೆಯನ್ನು ರಕ್ತದ ಕಣಕಣಗಳಲ್ಲಿ ಆವರಿಸಿರುವ ದಾಸ್ಯತ್ವವನ್ನು ಕಳೆದುಕೊಳ್ಳಲು ವ್ಯಕ್ತಿಗತ ಯತ್ನದಷ್ಟೇ ಸಂಘಟಿತ ಪ್ರಯತ್ನ ಹಾಗೂ ಬದ್ಧತೆ ಬೇಕೆಂಬುದಕ್ಕೆ ಎರಡು ಮಾತಿಲ್ಲ. ಪ್ರತಿಯೊಬ್ಬ ಹೆಣ್ಣು ತನ್ನ ತನ್ನ ಕುಟುಂಬಗಳಲ್ಲಿ ವಿದ್ಯಾಭ್ಯಾಸ, ಉದ್ಯೋಗ ಹಾಗೂ ವಿವಾಹದ ಆಯ್ಕೆಯೇ ಮೊದಲಾದ ಹತ್ತು ಹಲವಾರು ಹಕ್ಕುಗಳಿಗಾಗಿ ನಡೆಸಬೇಕಾದ ಹೋರಾಟ ಎಷ್ಟು ಅರ್ಥಪೂರ್ಣವೋ ಅಷ್ಟೇ ಅಗತ್ಯವಾದದ್ದು ಸಾಮಾಜಿಕವಾಗಿ ಇಂತಹ ಬೇಡಿಕೆಗಳ ಹೋರಾಟ. ಇದನ್ನೇ ನಾನು ಹೆಣ್ಣಿಗಿರುವ ಸಾಮಾಜಿಕ ಜವಾಬ್ದಾರಿ ಎನ್ನುವುದು. ತಮ್ಮ ವೈಯಕ್ತಿಕ ಅನುಭವಕ್ಕೆ ದಕ್ಕದ್ದಕ್ಕೆ ತಾವು ಕೈ ಹಾಕುವುದಿಲ್ಲ ಎನ್ನುವುದು ಸ್ವಾರ್ಥವಾದೀತು. ವಧೂದಹನ, ಅತ್ಯಾಚಾರ, ಸತಿ ಮುಂತಾದ ಪ್ರಕರಣಗಳು ಎಲ್ಲ ಹೆಣ್ಣಿಗೂ ವೈಯಕ್ತಿಕ ಅನುಭವವಾಗಬೇಕೆಂದರೆ, ಹೇಗೆ ಸಾಧ್ಯ ? ಆಗ ಚಳುವಳಿಯ ಅವಶ್ಯಕತೆಯೇ ಬರುತ್ತಿರಲಿಲ್ಲ. ಈ ದೃಷ್ಟಿಯಲ್ಲಿ ತಮ್ಮ ಹಕ್ಕುಗಳ ರಕ್ಷಣೆಗಾಗಿ, ತಮ್ಮ ಆರ್ಥಿಕ ಬೇಡಿಕೆಗಾಗಿ ಹಲವಾರು ವರ್ಷಗಳ ಹಿಂದೆ ಬೀದಿಗಿಳಿದ ಚಿಕಾಗೋದ ವೀರ ಮಹಿಳೆಯರ ಹೋರಾಟದ ಹಿಂದಿನ ಚೇತನ ನಮಗೆ ಮಾರ್ಗದರ್ಶಕವಾಗಲಿ.

ಎನ್. ಗಾಯತ್ರಿ

ಸ್ತ್ರೀ ಪ್ರತ್ಯೇಕತೆಯೆಂಬ ದೌಷ್ಟ್ಯ

ಸ್ತ್ರೀ ಪ್ರತ್ಯೇಕತೆಯೆಂಬ ಅಸಮಾನತೆ, ಪುರಾತನ ಕಾಲದಿಂದ ಬೆಳೆದು ಬಂದಿರುವಂಥದು. ಭಾರತ ಗಣರಾಜ್ಯದ ಸಂವಿಧಾನದ ಘೋಷಣೆಯಲ್ಲಿ "ಸಮಸ್ತ ನಾಗರಿಕರಿಗೂ ಸಮಾನ ಸಾತಂತ್ರ್ಯ, ಸಮಾನ ಸ್ಥಾನಮಾನ ಮತ್ತು ಸಮಾನ ಅವಕಾಶಗಳಿರಬೇಕು" ಎಂದು ಹೇಳಿದ್ದರೂ, ವಾಸ್ತವವಾಗಿ ಅವ್ಯಾವುವೂ ಜಾರಿಯಾಗಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ ನಮ್ಮ ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನ ಎರಡನೆಯ ದರ್ಜೆಯದಾಗಲು ಕಾರಣಗಳೇನು ? ಎಂಬುದನ್ನು ವೈಜ್ಞಾನಿಕವಾಗಿ ಅಭ್ಯಸಿಸಿದರೆ, ಅವುಗಳ ನಿವಾರಣೆಗೆ ಸೂಕ್ತ ಮಾರ್ಗಗಳನ್ನು ಹುಡುಕಲು ಸಾಧ್ಯವಾಗುತ್ತದೆ.

ಭಾರತದಲ್ಲಿ ನಾಗರೀಕತೆ ಆರಂಭವಾದಾಗ ಅಲ್ಲಿದ್ದುದು ಮಾತೃ ಪ್ರಧಾನ ವ್ಯವಸ್ಥೆ. ಸಮಾಜದಲ್ಲಿ ಗಂಡು-ಹೆಣ್ಣು ಇಬ್ಬರೂ ದುಡಿಯುತ್ತಿದ್ದರು ಉತ್ಪಾದನೆಯನ್ನು ಸಮಾನವಾಗಿ ಹಂಚಿಕೊಳ್ಳುತ್ತಿದ್ದರು. ಆದರೆ ಕೃಷಿ ವಲಯ ಭೂಮಿ ಹೆಚ್ಚಾದ ಹಾಗೆ, ಉತ್ಪಾದನಾ ಸಲಕರಣೆಗಳ ಮಾಲೀಕನಾದ ಗಂಡಸು ಹೆಚ್ಚುವರಿ ಕೆಲಸಕ್ಕೆ ಗುಲಾಮರನ್ನು ನೇಮಿಸಿಕೊಂಡ. ಹೀಗಾಗಿ ಹೆಂಗಸಿನ ಕೆಲಸ ಮೂಲೆ ಗುಂಪಾಯಿತು. ಆಸ್ತಿ ಶೇಖರಣೆ ಹೆಚ್ಚಾದ ಹಾಗೆ, ಅದು ತನ್ನ ಉತ್ತರಾಧಿಕಾರಿಗಳಿಗೆ ಹೋಗಬೇಕು ಎಂಬುದು ಗಂಡಸಿನ ಹಂಬಲವಾಯಿತು. ಈ ಕಾರಣದಿಂದ ಹೆಣ್ಣಿನ ಶೀಲದ ಮೇಲೆ ಹೊಸ ಕಟ್ಟುಪಾಡು ಬಂದುವು. ಅವಳು ಮನೆಯಲ್ಲೇ ಖೈದಿಯಾದಳು. ಅವಳ ಪಾತ್ರ ಭೋಗ ವಸ್ತುವಾಗಿ ಮತ್ತು ಮಕ್ಕಳನ್ನು ಹೆರುವುದಕ್ಕಾಗಿ ಸೀಮಿತವಾಯಿತು, ಆರ್ಥಿಕ ಉತ್ಪಾದನೆಯಲ್ಲಿ ಪಾಲುಗೊಳ್ಳದ ಮಹಿಳೆ ಎರಡನೆಯ ದರ್ಜೆಯ ಪ್ರಜೆಯಾದುದು ಸಹಜವೇ. ಗಂಡಸಿನ ಕೈಯಲ್ಲಿ ಎಲ್ಲ ಅಧಿಕಾರಗಳು ಕೇಂದ್ರೀಕೃತಗೊಂಡ ಪಿತೃ ಪ್ರಧಾನ ವ್ಯವಸ್ಥೆ, ನಮ್ಮಲ್ಲಿ ಉದಯವಾದದ್ದು ಹೀಗೆ.

ಜಗತ್ತಿನ ಎಲ್ಲ ಧರ್ಮಗಳೂ ಪಿತೃಪ್ರಧಾನ ಲಕ್ಷಣಗಳನ್ನೇ ಹೊಂದಿ ಸೈದ್ಧಾಂತಿಕವಾಗಿ ಮತ್ತು ರೂಢಿಗತವಾಗಿ ಇವು, ಸ್ತ್ರೀಗಿಂತ ಪುರುಷನೇ ಶ್ರೇಷ್ಠ ಎಂದು ಸಾರಿ ಹೇಳುತ್ತವೆ. 2500 ವರ್ಷಗಳ ಹಿಂದೆ ಮನು "ಸ್ತ್ರೀ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ" ಎಂದು ಘೋಷಿಸಿ, ಅಂದು ಸಮಾಜದಲ್ಲಿ ಸ್ತ್ರೀಗಿದ್ದ ಸ್ಥಾನಮಾನ ಸ್ಪಷ್ಟ ಪಡಿಸಿದ್ದಾನೆ ಹಿಂದೂ ಧರ್ಮದ ಕೆಳಗೆ ಅನೇಕ ಉಪಜಾತಿಗಳಿವೆ. ಅವು ಒಂದೊಂದೂ ಸ್ತ್ರೀಯ ಬಗ್ಗೆ ಕಠಿಣ ಸಂಪ್ರದಾಯಗಳನ್ನು ಅನುಸರಿಸುತ್ತಿವೆ. ನಮ್ಮಲ್ಲಿ ರೂಢಿಯಲ್ಲಿರುವ ಅನೇಕ ವ್ರತ, ನೇಮಗಳು ಹೆಂಗಸರನ್ನು ಗೊಡ್ಡು ನಂಬಿಕೆಗಳ ದಾಸರನ್ನಾಗಿ ಮಾಡಿವೆಯಲ್ಲದೆ, ಅವರ ವೈಚಾರಿಕ ಸೆಲೆಯನ್ನೇ ಬತ್ತಿಸಿ ಬಿಟ್ಟಿವೆ ಇಸ್ಲಾಂ ಧರ್ಮ ಗ್ರಂಥವಾದ ಖುರಾನಿನಲ್ಲಿ ಸ್ತ್ರೀಪುರುಷರು ಸಮಾನರು ಎಂಬ ಉಲ್ಲೇಖವಿದ್ದರೂ ಅನಂತರದ ವ್ಯಾಖ್ಯಾನಕಾರರು ಅದನ್ನು ಬದಲಾಯಿಸಿ ಮಹಿಳೆಯನ್ನು ಕೀಳುದರ್ಜೆಗೆ ತಳ್ಳಿದ್ದಾರೆ.

● ಡಾ|| ಅನುಪಮಾ ನಿರಂಜನ

ಬಹು ಪತ್ನಿತ್ವ, ತಲಾಖಾ ಬುರುಕಾ ಪದ್ಧತಿ, ಸ್ತ್ರೀಯ ಅಸಮಾನತೆಯನ್ನು, ಪ್ರತ್ಯೇಕತೆಯನ್ನು ಎತ್ತಿ ತೋರಿಸುವಂಥವು. ಕ್ರಿಶ್ಚಿಯನ್ ಧರ್ಮದಲ್ಲಿ ಈವ್ ಹುಟ್ಟಿದ್ದೇ ಆಡಮ್ ಮೂಳೆಯಿಂದ", ಎಂದು ಪ್ರತಿಪಾದಿಸಿ, ಹೆಣ್ಣು ಎರಡನೆಯ ದರ್ಜೆಯವಳು ಎಂದು ಸಾಬೀತು ಪಡಿಸಲಾಗಿದೆ. ಜೈನ, ಬೌದ್ಧ, ಸಿಖ್ ಹಾಗೂ ವೀರಶೈವ ಮುಂತಾದ ಸುಧಾರಣಾವಾದಿ ಧರ್ಮಗಳಲ್ಲಿ ಹೆಣ್ಣಿಗೆ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಸ್ವಾತಂತ್ರ್ಯಕ್ಕೆ ಆರ್ಥಿಕ ತಳಹದಿ ಇಲ್ಲದ್ದರಿಂದ ಸ್ತ್ರೀಯ ಸ್ಥಿತಿಗತಿಯತ್ತ ಹೆಚ್ಚಿನ ಬದಲಾವಣೆ ಕಂಡು ಬರಲಿಲ್ಲ.

ಇಂದಿನ ಸಮಾಜದಲ್ಲಿ ಕುಟುಂಬ ಮುಖ್ಯ ಘಟಕ. ಇದರಲ್ಲಿ ಸ್ತ್ರೀಯ ಸ್ಥಾನಮಾನ ವಿಶ್ಲೇಷಿಸಿದಾಗ ಅವಳಿಗಿರುವ ಕೀಳುಸ್ಥಾನ ನಿಚ್ಚಳವಾಗುತ್ತದೆ. ಒಂದು ಕುಟುಂಬದಲ್ಲಿ ಹೆಣ್ಣು ಮಗು ಹುಟ್ಟಿನಿಂದಲೇ ಕೀಳಾಗಿ ಕಾಣಲ್ಪಡು

18ನೇ ಪುಟ ನೋಡಿ

ಕತೆ

'ಊರ್ಮಿಳಾ'

"ದಾಸೀ....ದಾಸೀ...." ಅಸಹನೆಯಿಂದ ಕೂಗಿದಳು. ಇದೇನಿದು ; ತನ್ನ ಧ್ವನಿಯೇ ತನಗೆ ಪರಕೀಯವಾಗಿ ಕೇಳಿಸುತ್ತಿದೆಯಲ್ಲ........, ಮಹಾರಾಣಿ ಊರ್ಮಿಳೆ ಮತ್ತೊಮ್ಮೆ ಆ ಪಂಜರಗಳತ್ತ ದಿಟ್ಟಿಸಿದಳು. ಅಯ್ಯೋ.... ಉಕ್ಕಿ ಉಕ್ಕಿ ಬರುವ ಉಬ್ಬಳಿಕೆಗೆ ಕರುಳುಗಳೇ ಕಿತ್ತು ಬರುವ ಹಾಗೆ ಭಾಸ. ಈ ದಾಸಿ ಬೇಗ ಬರಬಾರದೆ.... ಬೇಗ ಬರಬಾರದೆ.... "ದಾಸೀ....ದಾಸೀ.... ಹುಂ ಹೆಜ್ಜೆಗಳ ಶಬ್ದ ಕೇಳಿಸುತ್ತಿದೆ....ಬಹುಶಃ ಓಡೋಡಿ ಬರುತ್ತಿರಬೇಕು....

"ದಾಸೀ ಅನುರಾಧೆ, ಈ ಪಂಜರದೊಳಗಿನ ಗಿಳಿಗಳನ್ನೆಲ್ಲ ಹೊರಕ್ಕೆ ಬಿಟ್ಟುಬಿಡು...." ದಾಸಿ ತನ್ನ ಹೆಸರು ಅನುರಾಧೆಯಲ್ಲ ಎಂದು ಹೇಳಹೊರಟವಳು ಒಡತಿಯ ವಿಚಿತ್ರ ಆಜ್ಞೆಗೆ ಒಂದು ಕ್ಷಣ ಕಣ್ಣರಳಿಸಿದಳು...."ದಾಸಿ, ಹೇಳಿದ ಮಾತು ಕೇಳಿಕೊಂಡು ಬಿದ್ದಿರುವುದು ಅಯೋಧ್ಯೆ ಅರಮನೆಯ ಧರ್ಮ, ನೆನಪಿರಲಿ...." ತೂರಿಬಂದ ಒಡತಿಯ ಧ್ವನಿ ಶೀತಲವಾಗಿತ್ತು. ಆಷಾಢದ ಬೆಳಂಜಾವದಲ್ಲಿ ಕೊಡಪಾನ ತಣ್ಣೀರು ಸುರಿದಂತಿತ್ತು. ಇಂದೇಕೋ ಒಡತಿಯ ಮನಸ್ಸು ಸರಿಯಿಲ್ಲ. ಇಲ್ಲದಿದ್ದರೆ ಕಳೆದ ಹದಿನೈದು ವರ್ಷಗಳಲ್ಲಿ ದನಿಯೆತ್ತಿ ಮಾತನಾಡದವಳು ಇಂದು ಮಾತನಾಡಬೇಕೆಂದರೆ...." ದಾಸಿ ಒಮ್ಮೆ ಸೊಂಟ ಬಾಗಿಸಿ ಹೊರನಡೆದಳು. ಮರುಕ್ಷಣಕ್ಕೆ ಪಂಜರದ ಬಾಗಿಲುಗಳು ತೆರೆದುಕೊಂಡ ಕೀಚು ಶಬ್ದ. ಊರ್ಮಿಳೆಗೆ ಒಮ್ಮೆ ಹಗುರ ಉಸಿರು ಬಿಡುವ ಹಾಗಾಯಿತು. "ದೇವರೆ, ಎಷ್ಟು ವರ್ಷಗಳಿಂದ ಮುಸುಕಿಕೊಂಡ ಬಂಧನ. ದೇವರೇ, ತನಗೆ ಇಷ್ಟು ದಿನವೂ ಹೊಳೆಯಲಿಲ್ಲವೇಕೆ ? ವರ್ಷವರ್ಷ ಹೊಸಹೊಸ ಗಿಳಿಗಳನ್ನು ತರಿಸಿ, ಈ ಪಂಜರದೊಳಗಿಟ್ಟು, ಹಣ್ಣು–ಹಂಪಲು ಕೊಟ್ಟು ಬಂದಿಗಳನ್ನಾಗಿಸಿದ್ದೆನಲ್ಲ. ಇರಲಿ, ಇದೀಗ ಈ ಗಿಳಿಗಳನ್ನು ಹೊರಬಿಟ್ಟಿದ್ದೇನೆ, ಸ್ವಾತಂತ್ರ್ಯ ಕೊಟ್ಟಿದ್ದೇನೆ, ಅವು ಹಾರಲಿ, ಅಖಂಡ ನೀಲನಭದ ಉದ್ದಗಲಗಳನ್ನು ಅಳೆಯಲಿ. ಆಕಾಶದಲ್ಲಿ ರೆಕ್ಕೆಗಳನ್ನು ಪಟಗುಟ್ಟಿಸುತ್ತಾ, ಈ ಊರ್ಮಿಳೆಯನ್ನೂ ಅವಳ ಪಂಜರವನ್ನೂ ನೋಡಿ ನಗಲಿ, ಗಹಗಹಿಸಿ ನಗಲಿ.

ಒಮ್ಮೆಗೇ ತೆರೆದುಕೊಂಡ ಪಂಜರದ ಬಾಗಿಲುಗಳೊಳಗೆ ಗಿಳಿಗಳಿಗೆ ದಿಗ್ಭ್ರಮೆ, ನಡುಮಧ್ಯಾಹ್ನ ಸಿಕ್ಕ ಸ್ವಾತಂತ್ರ್ಯ ಸಂಭ್ರಮ ರೆಕ್ಕೆಗಳ ಪಟಪಟ....ಊರ್ಮಿಳೆ ಮತ್ತೊಮ್ಮೆ ದಿಟ್ಟಿಸುತ್ತಾಳೆ, "ಛೇ' ಈ ಗಿಳಿಗಳು ಹಾರಬಾರದೆ... ಇದೀಗ... ಈ ಕ್ಷಣ... ಗಿಳಿಗಳು ಹಾರುವುದಿಲ್ಲ.. ಅಲ್ಲೇ ಕುಪ್ಪಳಿಸಿ.... ಒಂದು ಕಾರಂಜಿಯ ಕಟ್ಟೆಯ ಮೇಲೆ, ಮತ್ತೊಂದು ಅಂಗಳದ ಮೆಟ್ಟಿಲ ಮೇಲೆ. "ಅಯ್ಯೋ ಈ ಗಿಳಿಗಳು ಹಾರುವುದಿಲ್ಲ...." ಮುತ್ತಿಕೊಂಡು ಬಂದ ಅಸಹಾಯಕತೆಯೊಳಗೆ ಊರ್ಮಿಳೆಗೆ ಅಲ್ಲೇ ಕುಸಿದು ಬೀಳುವ ಹಾಗಾಯಿತು. "ಛೆ ! ನನ್ನ ಭಾವನೆ ತಪ್ಪಾಯಿತು. ಈ ಗಿಳಿಗಳು ವರ್ಷವರ್ಷಗಳ ಬಂಧನದೊಳಗೆ

● ಭಾರತಿ ಕಿನ್ಹಾಳ್

ಹಾರುವುದನ್ನೇ ಮರೆತ ಗಿಳಿಗಳು. ತನ್ನ ಪರಿಸ್ಥಿತಿಯಾದರೂ ಏನು ? ಹದಿನೈದು ವರ್ಷದ ಹಿಂದೆ ಒಂದು ಪಂಜರದಿಂದ ಮತ್ತೊಂದಕ್ಕೆ ವರ್ಗಾವಣೆ. ಅರಮನೆ, ಅರಮನೆಯ ದೊಡ್ಡದೊಡ್ಡ ಬೆಳ್ಳಿಯ ಕಂಬಗಳು, ಜರತಾರಿ ವಸ್ತ್ರ, ಸುವರ್ಣ ಇಷ್ಟೇ ಸಾಕೆ ಒಂದು ಹೆಣ್ಣಿಗೆ? ಛೆ ! ಆರ್ಯಪುತ್ರ, ನೀನು ನನ್ನನ್ನು ಮೋಸಗೊಳಿಸಿಬಿಟ್ಟೆ. ಈ ಊರ್ಮಿಳೆಯಿಂದ ಅವಳ ಯವ್ವನ, ಭಾವನೆಗಳು, ಹೃದಯ, ಪ್ರೀತಿ, ಸರ್ವಸ್ವವನ್ನೂ ಧೂಳಿಪಟಗೊಳಿಸಿಬಿಟ್ಟೆ". ಒಂದು ಕ್ಷಣ ಊರ್ಮಿಳೆಗೆ ಲಕ್ಷ್ಮಣನ ಮೇಲೆ ಕೋಪ ಉಕ್ಕಿ ಬಂತು. ಈ ಮೂರ್ಖ ಗಂಡಸರು ಯಾಕೆ ಒಂದು ಹೆಣ್ಣಿಗೆ ಮನಸ್ಸಿದೆ ಎಂದು ಯೋಚಿಸುವುದಿಲ್ಲ ? ಇವನ ಮುಷ್ಠಿಯೊಳಗೆ ತನ್ನ ಬದುಕನ್ನು ಪಯಣವಾಗಿ ಕೊಟ್ಟುಬಿಟ್ಟೆ....ಆ ಕಪಿಮುಷ್ಠಿಯೊಳಗೆ ಬದುಕು ಕರಗಿ ತೊಟ್ಟುತೊಟ್ಟಾಗಿ ಭೂಮಿಪಾಲಾಯಿತಲ್ಲ....ಇವನೇನೋ

ಆದರ್ಶದ ಬೆನ್ನುಹತ್ತಿ ಕಾಡಿಗೆ ನಡೆದ. ಆಮೇಲೆ ಈ ಊರ್ಮಿಳೆ ಪಟ್ಟಿದ್ದು ಸ್ವಲ್ಪ ಕಷ್ಟವೆ ? ಎಷ್ಟೊಂದು ಒಂಟಿತನ, ಸಹಿಸಲಾರದ ಒಂಟಿತನ, ಕೆಲವೊಮ್ಮೆ ಅರಮನೆಯ ಗೋಡೆಗಳಿಗೆ ತಲೆತಲೆ ಘಟ್ಟಿಸಿಕೊಂಡು ಬಿಡುವಷ್ಟು ಒಂಟಿತನ....ದೇವರ ದಯೆ, ಈ ಊರ್ಮಿಳೆ ಹುಚ್ಚಿಯಾಗಲಿಲ್ಲ. ಇಂದೇಕೋ ನೆನಪಿಸಿಕೊಳ್ಳಬಾರದು ಎಂದು ಎಷ್ಟು ಪ್ರಯತ್ನಿಸಿದರೂ ತಡೆಯದೆ ನೆನಪುಗಳ ಪ್ರವಾಹ ನುಗ್ಗುತ್ತಿದೆ. ಈ ನೆನಪುಗಳೊಂದಿರದಿರುತ್ತಿದ್ದರೆ ಇಂದು ಲಕ್ಷ್ಮಣನನ್ನು ಕ್ಷಮಿಸಬಹುದಿತ್ತು.

ತಮ್ಮ ಮದುವೆ ನಡೆದದ್ದು ಹದಿನೈದು ವಸಂತಗಳ ಹಿಂದೆ. ಎಂಥಾ ಸ್ವಯಂವರ ಅದು, ಅಕ್ಕನದು ; ರಾಜಕುಮಾರಿಯಾದ ತನಗೇ ಆ ವೈಭವ ಉಸಿರುಗಟ್ಟಿಸಿದಾಗ ಉಳಿದವರ ಪಾಡೇನು....ಅಪ್ಪ ಗಡಿಬಿಡಿಯಲ್ಲೂ ಹೇಳಿದ ಮಾತು ತನ್ನ ಕಿವಿಗೂ ಬಿದ್ದಿತ್ತು. "ಊರ್ಮಿಳೆಯದ್ದೂ ಮದುವೆಯ ವಯಸ್ಸು ಬಂತಲ್ಲ...." ಅಮ್ಮನೆಂದ ಮಾತಿಗೆ ಅಪ್ಪ, "ಹೌದು, ವರ್ಷ ಹದಿನೈದಾಯಿತಲ್ಲವೆ ಅವಳಿಗೆ....ನೀನೇನೇ ಹೇಳು ದೇವಿ, ಇಂಥ ಸ್ವಯಂವರ ನಡೆದ ಮೇಲೆ ರಾಜಬೊಕ್ಕಸ ಚೇತರಿಸಿಕೊಳ್ಳಲು ವರ್ಷ ಹತ್ತಾದರೂ ಬೇಕು."

"ಅಂತೂ ಇಂತೂ ಗೆದ್ದ ವೀರನ ತಮ್ಮನೇ ತನಗೂ ವರನಾಗಿದ್ದ. ಛೆ ! ಈ ಊರ್ಮಿಳೆಯದು ಯಾವಾಗಲೂ ಹೀಗೆಯೇ. ಸದಾ ಎರಡನೆಯ ಸ್ಥಾನ. ಜನಕನ ಸ್ವಂತ ಮಗಳು ತಾನಾದರೂ 'ಜಾನಕಿ' ಎಂದು ಕರೆಯಿಸಿಕೊಳ್ಳಲಿಲ್ಲ. ಮಿಥಿಲಾಧೀಶ್ವರನ ಸ್ವಂತ ಮಗಳಾದರೂ 'ಮೈಥಿ' ತಾನಾಗಲಿಲ್ಲ. ಹಾಗೆಂದ ಮಾತ್ರಕ್ಕೆ ತಾನೆಂದೂ ಅಕ್ಕ ಸೀತೆಯ ಮೇಲೆ ಅಸೂಯೆ ಪಟ್ಟವಳಲ್ಲ. ಅವಳೋ ಜಗದೇಕ ಸುಂದರಿ. ಸ್ವಯಂವರ ಮಾಡಿದರೆ ಸಾವಿರಾರು ರಾಜರು ಬಂದಾರು. ಆದರೆ ತಾನು ಜಗದೇಕ ಸುಂದರಿಯೂ ಅಲ್ಲ, ಸ್ವಯಂವರ ಮಾಡಿದರೆ ರಾಜರುಗಳು ಬಂದಾರು ಎಂಬ ಭರವಸೆಯೂ ಇಲ್ಲವೆಂಬ ವಾಸ್ತವದ ಅರಿವೂ ಹದಿನೈದಕ್ಕೇ ತನಗಿತ್ತು. ಲಕ್ಷ್ಮಣನನ್ನು ನೋಡಿದೆ....ಅದೇಕೋ ಆ ಕ್ಷಣವೇ ಮನಸ್ಸನ್ನು ಸೂರೆಗೊಂಡುಬಿಟ್ಟ. ಪಾಲಿಗೆ ಬಂದದ್ದು ಪಂಚಾಮೃತ ಎನ್ನುವುದು ಊರ್ಮಿಳೆಯ ಮತ. ಅಕ್ಕನ ಗದ್ದಲದ ಮದುವೆಯೊಳಗೆ ತನ್ನದೂ ಮುಗಿದೇ ಹೋಯಿತು. ದಿಬ್ಬಣ ಹೊರಟ ಸಂದರ್ಭದಲ್ಲಿ ಯಾವುದೋ ದಾಸಿ ನಗುತ್ತಾ ಅಂದ ಮಾತು ನೆನಪಿದೆ....ಯಾರೋ ಯಾಕೆ, ಮಾಲಿನಿಯೇ ಇರಬೇಕು...."ನಮ್ಮಲ್ಲೂ ಹಾಗೆಯೇ ಒಡತಿ ಖರ್ಚು ಕಡಿಮೆಯಾಗಲೆಂದು ಅಕ್ಕತಂಗಿಯರ ಮದುವೆ ಒಟ್ಟೊಟ್ಟಿಗೇ........." ಆ ಹುಚ್ಚು ಯವ್ವನದ ಭರದಲ್ಲಿ ಆ ಮಾತುಗಳ ಸತ್ಯ ಅರಿವಾಗಿರಲಿಲ್ಲ, ಅರಿವಾಗುವುದೂ ಬೇಕಿರಲಿಲ್ಲ. ಬಯಸಿದವನು ಸಿಕ್ಕಿದ್ದ. ಅವನ ಒಲವಿನ ನಭದೊಳಗೆ ರೆಕ್ಕೆ ಬಿಚ್ಚಿ ಹಾರುವ ಬಯಕೆ. ಮೊದಲ ದಿನ ಸಂಧಿಸಿದವನ ಬಾಯಿಂದ ಓರ್ವ ಯುವತಿ–ಪತ್ನಿ ನಿರೀಕ್ಷಿಸಬಹುದಾದ ಮಾತು ಎಂಥದ್ದು ? ದಾಸಿಯರಿಂದ ಕದ್ದು ಕೇಳಿದ್ದು....ತಾನೇ ಕಲ್ಪಿಸಿಕೊಂಡಿದ್ದು....ಹಾಗೇನೂ ಆಗಲಿಲ್ಲ. ಪ್ರಥಮ ಬಾರಿ ತನ್ನ ಆರ್ಯಪುತ್ರ "ಪ್ರಿಯೇ...." ಎಂದು ಕರೆಯಲಿಲ್ಲ. ಬದಲಿಗೆ, "ಊರ್ಮಿಳೆ, ನನ್ನ ಬದುಕಿನಲ್ಲಿ ನಿನಗಿಂತ ಮುಂಚೆ ಪ್ರವೇಶಿಸಿದವನು ನನ್ನಣ್ಣ. ಸದಾ ನೆನಪಿನಲ್ಲಿಡು, ನನ್ನ ಮೊದಲ ಪ್ರೀತಿ ಅಣ್ಣನದು, ನಂತರದ ಸ್ಥಾನ ನಿನ್ನದು." ಹೂಂ, ಮತ್ತದೇ ಎರಡನೇ ಸ್ಥಾನ, ಈ ಊರ್ಮಿಳೆ ಸಿಟ್ಟಾಗಲಿಲ್ಲ. ಹುಟ್ಟಿದಾಗಿನಿಂದ ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟವಳಲ್ಲವೇ ತಾನು ?....ಬದಲಿಗೆ ಭಾವುಕಳಾಗಿ ನುಡಿದಿದ್ದೆ, "ಆರ್ಯಪುತ್ರ ನಿಮ್ಮ ಭ್ರಾತೃ ಪ್ರೀತಿಯ ನದಿಯೊಳಗೆ ತಿಮಿಂಗಿಲವಾಗುವವಳಲ್ಲ ಈ ಊರ್ಮಿಳೆ." ಆದರೆ ಲಕ್ಷ್ಮಣನಿಂದ ಕೊಂಚ ಪ್ರೀತಿಯನ್ನು ನಿರೀಕ್ಷಿಸಿದ್ದೂ ತಪ್ಪಾಯಿತೆ ? ತಮ್ಮಿಬ್ಬರ ಪತಿ–ಪತ್ನಿಯ ಸಂಬಂಧದೊಳಗೂ ರಾಘವನ ನೆರಳು ಗಾಢವಾಗಿ ಕಾಡತೊಡಗಿತಲ್ಲ....

ಎಷ್ಟು ಮರೆಯಬೇಕೆಂದುಕೊಂಡರೂ ಆ ದಿನದ ಘಟನೆ ಮನದಂಗಳದಿಂದ ಮರೆಯಾಗುತ್ತಿಲ್ಲ. ತನಗೆ ಮೊದಲಿನಿಂದಲೂ ಅಷ್ಟೆ, ನಿಸರ್ಗ—ಹೂ ಬಿಟ್ಟು, ಕಾಯಾಗಿ, ಹಣ್ಣಾಗಿ ಮತ್ತೆ ಬೀಜವಾಗಿ, ಬೀಜ ಮೊಳೆತು ಸಸಿಯಾಗಿ, ಹೂವಾಗಿ.... ಇಂಥ ಕ್ರಿಯೆಗಳೊಳಗೆ ಅಪರಿಮಿತ ಆಸಕ್ತಿ, ಸೃಷ್ಟಿಕ್ರಿಯೆಯೊಳಗೆ ತೀರದ ಕುತೂಹಲ, ಒಂದು ಬೇಲಿಯ ಹೂವನ್ನು ಗಂಟೆಗಟ್ಟಳೆ ನಿಂತು ನೋಡುವ ತನ್ಮಯತೆ. ಹೂಂ, ಈಗಲೂ ನೆನಪಿದೆ, ಆ 'ವೈಶಾಖೀ' ಹೂವು ತನಗೆ ಮೊದಲಿನಿಂದಲೂ ಮಹಾ ಪ್ರಿಯವಾದ ಹೂವು. ಏಕೋ ಏನೋ ಮಿಥಿಲೆಯ ನೆನಪುಗಳನ್ನು ತರುತ್ತಿದ್ದ ಆ ಗಿಡದ ಮೇಲೂ ತೀರದ ಮೋಹ. ಕೇವಲ ಮಿಥಿಲೆಯೊಳಗೆ ಮಾತ್ರವೇ ಕಾಣಸಿಗುತ್ತಿದ್ದ ಆ ಗಿಡವನ್ನ ತನ್ನ ದಿಬ್ಬಣದ ಜೊತೆಗೇ ಮರೆಯದೆ ತಂದಿದ್ದೆ....ಇಲ್ಲಿ ಎಷ್ಟೊಂದು

ಮುತುವರ್ಜಿ ಪ್ರೀತಿಗಳೊಳಗೆ ಸಾಕಿದ್ದೆ. ಆ ದಿನ ಬೆಳಂಜಾಮಕ್ಕೆ ಏತಕ್ಕೋ ಎಚ್ಚರಾಯಿತು. ಹೊರಗೆ ಹಕ್ಕಿಗಳ ಚಿಲಿಪಿಲಿ. ಯಾಕೋ ಎದ್ದು ತೋಟಕ್ಕೆ ಹೋಗುವಾ ಎನ್ನಿಸಿತು. ಪಕ್ಕಕ್ಕೆ ತಿರುಗಿ ನೋಡಿದೆ.... ಇವನು ಗೋಡೆಯ ಕಡೆ ಮುಖ ಮಾಡಿ ಸಣ್ಣಗೆ ಗೊರಕೆ ಹೊಡೆಯುತ್ತಿದ್ದ.... ಹೊದಿಕೆಯನ್ನು ಚೆನ್ನಾಗಿ ಹೊದಿಸಿ ಹೊರಬಂದೆ. ಬಾಗಿಲ ಹೊರಗೆ ಮಲಗಿದ್ದ ಮಾಲಿನಿ ಗಡಬಡಿಸಿ ಎದ್ದಳು. ಎದ್ದವಳ ಮುಖದ ಮೇಲೆ ಅಚ್ಚರಿ.... ಹೊಸದಾಗಿ ಮದುವೆಯಾದ ಒಡತಿ ಈ ಬೆಳಂಜಾಮದ ಚಳಿಯೊಳಗೆ ಪತಿಯ ಮಗ್ಗುಲನ್ನು ಬಿಟ್ಟು ಹೊರಬರುವುದೆಂದರೆ....! "ಮಾಲಿನಿ ಬೇಗ ಒಂದು ಶಾಲು ತೆಗೆದು ಕೊಡು. ಹೊರಗೆ ಅಂಗಳದಲ್ಲಿರುತ್ತೇನೆ." ಅವಳ ಉತ್ತರಕ್ಕಾಗಿ ಕಾಯದೆ ಅಂಗಳಕ್ಕೆ ನಡೆದಿದ್ದೆ. ಎಂಥ ಮ ಹೋ ನ್ನ ತ ಬೆಳಗು ಅದು....ಎಷ್ಟು ಅದ್ಭುತವಾದ ಸೂರ್ಯೋದಯ.... ಅರೆ! ಈ ಸೂರ್ಯ ಭಗವಾನ ಕತ್ತಲೊಳಗಿನ ವಸ್ತುಗಳನ್ನೆಲ್ಲ ಹೇಗೆ ತೊಳೆ ತೊಳೆದು ಬಂಗಾರವರ್ಣ ನೀಡುತ್ತಾನಲ್ಲ ಎಂಬ ಬಗ್ಗೆ ಅಚ್ಚರಿಯೊಳಗೆ ಹೊತ್ತು ಕಳೆದದ್ದು ಅರಿವಾಗಲಿಲ್ಲ. ಒಮ್ಮೆಗೇ ಮಾಲಿನಿ, 'ಮಹಾರಾಣಿ....ಬೇಗ ಬನ್ನಿ....ಬೇಗ ಬನ್ನಿ....' ಎಂದು ಕೂಗುತ್ತಾ ಓಡಿಬಂದಾಗ ಸ್ವಪ್ನಲೋಕದಿಂದ ಮುಕ್ತಿ ಹೊಂದಿದ್ದೆ. "ಮಹಾರಾಣಿ ಬೇಗ ನೋಡಬನ್ನಿ, ನಿಮ್ಮ ಪ್ರೀತಿಯ 'ವೈಶಾಖಿ' ಹೂ ಬಿಟ್ಟಿದೆ...." ತನಗೆ ಎಷ್ಟು ಸಂತೋಷವಾಗಿತ್ತು. ದೇವರೇ, ಒಂದೇ ಓಟಕ್ಕೆ ಹೂವಿದ್ದ ತಾಣಕ್ಕೆ ಓಡಿದ್ದೆ....ವೈಶಾಖದಲ್ಲಿ ಮಾತ್ರ ಹೂ ಬಿಡುವ 'ವೈಶಾಖಿ' ತನಗಾಗಿ....ಈ ಊರ್ಮಿಳೆಗಾಗಿ ಒಂದು ಹೂವನ್ನು ಆಷಾಢದ ಚಳಿಯೊಳಗೂ ಅರಳಿಸಿಕೊಂಡು ನಿಂತಿದೆ. ಆ ತಿಳಿಹಳದಿ ಹೂವಿನ ಸೌಂದರ್ಯವನ್ನು ನೋಡುತ್ತಾ ನಿಂತಿದ್ದೆ. ಹಿಂದಿನಿಂದ ಇವನ ಧ್ವನಿ ಕೇಳಿಸಿತ್ತು, "ಇದೇನಿದು ದೇವಿ, ಈ ಹೊತ್ತಿನಲ್ಲಿ.... ಹೀಗೆ..?" ಅವನ ದನಿಯೊಳಗಿನ ಅಸಮಾಧಾನವನ್ನೂ ಗುರುತಿಸದಷ್ಟು ಕುರುಡಿಯಾಗಿದ್ದ, ಸಂತೋಷದ ಭರದಲ್ಲಿ. "ಆರ್ಯಪುತ್ರ, ನೋಡಿದಿರಾ ಈ ಹೂವನ್ನ....! ನಾನು ಮಿಥಿಲೆಯಿಂದ ತಂದ ಈ ಗಿಡ ಮೊದಲ ಹೂ ಬಿಟ್ಟಿದೆ....ಕಂಡಿರಾ ಎಷ್ಟೊಂದು ಚೆಲುವಾಗಿದೆ....!" ತಾನವನಿಗೆ ತೋರಿಸಿದ್ದೆ. ಒಮ್ಮೆ ತನ್ನ ಮುಖವನ್ನೂ ಆ ಹೂವನ್ನೂ ಬದಲಿಸಿ ಬದಲಿಸಿ ನೋಡಿದವನೇ ಅನಿರೀಕ್ಷಿತವಾಗಿ ಬಗ್ಗಿ ಆ ಹೂವನ್ನು ಕಿತ್ತುಬಿಟ್ಟಿದ್ದ. "ಆರ್ಯಪುತ್ರ! ಇದೇನು ಮಾಡಿದಿರಿ!!" ತಾನು ದಿಗ್ಭ್ರಮೆಯೊಳಗೆ ಜಾರಿದ್ದೆ.

"ಈ ಲಕ್ಷ್ಮಣನ ತೋಟದೊಳಗೆ ಅರಳುವ ಪ್ರತಿಯೊಂದು ಮೊದಲ ಹೂವೂ ಅಣ್ಣನದು, ಇದು ನಿನಗೆ ಗೊತ್ತಿಲ್ಲವೆ?" ತನ್ನ ಉತ್ತರಕ್ಕೂ ಕಾಯದೆ ಆ ಹೂವನ್ನ ಹಿಡಿದು ಬಿರುಸಾಗಿ ನಡೆದು ಹೋಗಿಬಿಟ್ಟ....ತಾನು ಅಲ್ಲಿಯೇ ಬಿಕ್ಕುತ್ತಾ ಶಿಲಾಸನದ ಮೇಲೆ ಕುಸಿದು ಬಿದ್ದಿದ್ದೆ.

ಆ ದಿನ ಹೊಳೆಯದಿದ್ದದ್ದು ಈ ದಿನ ಪದರ ಪದರವಾಗಿ ಹೊಳೆಯುತ್ತಿದೆ. ತಾನಂದು ಅತ್ತದ್ದು ಅವನು ಹೂವು ಕಿತ್ತಿದ ಎಂಬುದಕ್ಕಾಗಿಯೇ? ಅಥವಾ ಕಿತ್ತವನು ತನಗೆ ಮುಡಿಸದೆ ಅಣ್ಣನಿಗೆಂದು ಒಯ್ದ ಎಂತಲೆ? ಊಹೂಂ, ಖಂಡಿತವಾಗಿಯೂ ಅಲ್ಲ.

ಹೂವುಗಳನ್ನು ಕಿತ್ತುವುದು ತನಗೆ ಮೊದಲಿನಿಂದಲೂ ಹಿಡಿಸದ ಮಾತು. ಆದರೂ ಅಂದು ಅಖಂಡವಾಗಿ ದುಃಖ ಆವರಿಸಿದ್ದು ಅದಕ್ಕಾಗಲ್ಲ. ಅವನು ಆ ಹೂವನ್ನು ಕಿತ್ತಿ ತನ್ನ ತುರುಬೊಳಗಿಟ್ಟು, "ದೇವಿ ಈ ಸುಂದರವಾದ ಹೂವಿಗೆ ನಿನ್ನ ಮುಡಿಗಿಂತ ಮಿಗಿಲಾದ ಸ್ಥಾನವಿದೆಯೇ" ಅಂದಿದ್ದರೆ ಬೇಡವೆನ್ನುವಷ್ಟು ಅರಸಿಕಳೂ ತಾನಾಗಿರಲಿಲ್ಲ. ಆದರೆ ಲಕ್ಷ್ಮಣ ಹಾಗೆ ಮಾಡಲಿಲ್ಲ, ಪ್ರೀತಿ ವಿಶ್ವಾಸಗಳ ಮೇಲೆ ತಣ್ಣೀರು ಹೊಯ್ದು ಹೊರಟು ಹೋದ. ಆ ದಿನ ತನಗೆ ಮುಡಿಸಲಿಲ್ಲ ಎಂಬುದಕ್ಕಿಂತಲೂ ತನ್ನ ಭಾವನೆಗಳು ಲಕ್ಷ್ಮಣನಿಗೆ ಏನೂ ಅಲ್ಲ ಎಂಬ ಸತ್ಯದ ಅರಿವಾಗಿ ದುಃಖ ಒತ್ತಿ ಬಂದಿತ್ತು. ಅವನು ಒಂದು ವೇಳೆ, "ದೇವಿ, ಈ ಹೂವನ್ನು ಕಿತ್ತೊಯ್ದು ಇಬ್ಬರೂ ಅಣ್ಣನಿಗೆ ಕೊಡೋಣ, ಆತ ನೋಡಿ ಸಂತೋಷ ಪಟ್ಟಾನು" ಎಂದಿದ್ದರೆ ತಾನು ಬೇಡವೆನ್ನುತ್ತಿದ್ದೆನೆ?....ಅಣ್ಣನಿಗೆ ಸಮರ್ಪಿಸುವುದರಿಂದಲೇ ಇವನ ಸಂತೋಷ ಸಾಧ್ಯವಾಗುವುದಾದರೆ ಇವನ ಸಂತೋಷವೇ ತನ್ನ ಸಂತೋಷವೂ ಅಲ್ಲವೇ?.... ಆದರೆ....ಆದರೆ ಲಕ್ಷ್ಮಣ ಹಾಗೆ ಮಾಡಲಿಲ್ಲ...."ಈ ಗಿಡ ನಿನ್ನದು, ಈ ಹೂವು ಕೀಳಲೆ?" ಎಂದು ಉಪಚಾರಕ್ಕಾಗಿ ಒಂದು ಮಾತೂ ಕೇಳಲಿಲ್ಲ....ಈ ಊರ್ಮಿಳೆಯನ್ನು ನಿರ್ಲಕ್ಷಿಸಿಬಿಟ್ಟ, ಸಂಪೂರ್ಣವಾಗಿ. ಆ ನಿರ್ಲಕ್ಷ್ಯವೇ ತನ್ನ ದುಃಖಕ್ಕೆ ಕಾರಣ ಎಂದು ಈ ಮುಸ್ಸಂಜೆ ಬೆಳಕಲ್ಲಿ ಹೊಳೆಯುತ್ತಿದೆ. ನನ್ನ ಅವನ ದಾಂಪತ್ಯದುದ್ದಕ್ಕೂ ಈ ನಿರ್ಲಕ್ಷ್ಯವೇ ನೆರಳಾಗಿ ಕಾಡಿತಲ್ಲ....

ಆ ದಿನ ಕಾಡಿಗೆ ಇವನು ಹೊರಟುನಿಂತ ದಿನ.... ಇದೇ ಹಿಮಾಂಶು ಶಿಲಾತಲದ ಮೇಲಲ್ಲವೇ ಅವನು ಕುಳಿತದ್ದು.... ಊರ್ಮಿಳೆ ಸೆರಗಿನಿಂದ ಒಮ್ಮೆ ಮುಖ ಒರೆಸಿಕೊಂಡಳು. "ದಾಸೀ ಒಂದು ಗಿಂಡಿ ನೀರು ತಾ...." ನೀರು ಗಟಗಟನೆ ಕುಡಿದಳು, ಒಳ್ಳೆ ಏಲಕ್ಕಿ ಹಾಕಿದ ತಂಪಾದ ನೀರು.... ಆದರೆ ಎಷ್ಟು ನೀರು ಸುರಿದರೇನು ಒಳಗೆ ಉರಿವ ದಾವಾನಲ ತಂಪಾಗುತ್ತದೆಯೆ ?.... ಇವನು ಇದೇ ಶಿಲಾತಲದ ಮೇಲೆ ಕುಳಿತಿದ್ದ.... ತಾನು ಅತ್ತೆ, ಕರೆದೆ ಈ ಮಹಲ್ಲೊಳಗೇ ಬಿದ್ದು ಹೊರಳಾಡಿದೆ...."ಆರ್ಯಪುತ್ರ ಈ ಊರ್ಮಿಳೆಯನ್ನೂ ನಿನ್ನೊಂದಿಗೇ ಕರೆದೊಯ್ಯಿ"....ದಾಸಿಯರೊಳಗೆ ದಾಸಿಯಾಗಿ ನಿಮ್ಮ ಮೂವರ ಸೇವೆ ಮಾಡಿಕೊಂಡಿರುತ್ತೇನೆ ....ಆದರೆ ತನ್ನೆಲ್ಲ ಕಣ್ಣೀರು ಮಹಲ್ಲೊಳಗೆ ಕಲೆಸಿಹೋದ ಮೇಲೂ ಆತ ಈ ಶಿಲಾತಲದಷ್ಟೇ ದೊಡ್ಡ ಬಂಡೆ.... "ಊರ್ಮಿಳೆ, ನಿನ್ನನ್ನು ಅರಣ್ಯಕ್ಕೆ ಕರೆದೊಯ್ಯಲಾರೆ.... ಅಣ್ಣನ ಸೇವೆ ಮಾಡುವುದು ನನ್ನಧರ್ಮ, ರಾಜಧಾನಿಯಲ್ಲಿದ್ದು ಅತ್ತೆ ಮಾವನ ಸೇವೆ ಮಾಡಿಕೊಂಡಿರುವುದು ನಿನ್ನಧರ್ಮ...."

"ಆ ಧರ್ಮ ಪಾಲಿಸಲು ಭರತರಿದ್ದಾರಲ್ಲ, ಶತ್ರುಘ್ನರಿದ್ದಾರಲ್ಲ.... ಮಾಂಡವಿ ಶೃತಕೀರ್ತಿಯರಿದ್ದಾರಲ್ಲ...." ತಾನು ವಾದಿಸಿದ್ದೆ.... ಆತ ಆ ವಾದಗಳನ್ನೆಲ್ಲ ತಳ್ಳಿಹಾಕಿದ್ದ "ನಿನ್ನನ್ನು ಕಾಡಿಗೆ ಕರೆದೊಯ್ದರೆ ನನ್ನ ಬ್ರಹ್ಮಚರ್ಯದ ಗತಿಯೇನು ?" ಆಗ ತನಗೆ ಕೇಳಲು ಹೊಳೆದಿರಲಿಲ್ಲ.... ಇದೀಗ ಉಳಿದ ಹದಿನಾಲ್ಕು ವರ್ಷಗಳೂ ಆ ಪ್ರಶ್ನೆ ಭೂತಾಕಾರವಾಗಿ ಕೊರೆದಿದೆ....ಕ್ಷಣಕ್ಷಣವೂ ಕಟಿದಿದೆ.... "ನಿನ್ನನ್ನು ಬ್ರಹ್ಮಚರ್ಯ ಪಾಲಿಸೆಂದವರಾರು ?....ಅಥವಾ ಕಾಡಿಗೆ ಹೋಗಿ ಅಣ್ಣನ ಸೇವೆ ಮಾಡುತ್ತೇನೆಂದೆಯಲ್ಲಾ. 'ಅರ್ಥೇಚ....ಕಾಮೇಚ.... ನಾತಿಚರಾಮಿ' ಎಂದು ಉರಿಯುವ ಬೆಂಕಿಯಮುಂದೆ ಪ್ರಮಾಣಮಾಡಿ ಮದುವೆಯಾದೆಯಲ್ಲ, ಆ ಹೆಂಡತಿಯ ಜೊತೆಗೆ ಸಂಸಾರ ಮಾಡಿಕೊಂಡಿರುವುದು ನಿನ್ನ ಧರ್ಮವೆನ್ನಿಸಲಿಲ್ಲವೋ...." ಒಟ್ಟಿನಲ್ಲ ತಾನು ಆದಿನ ಆ ಮಾತು ಕೇಳಲಿಲ್ಲ...."ಆರ್ಯಪುತ್ರ ನನ್ನನ್ನು ಈ ಅರಮನೆಯ ಒಂಟಿತನದೊಳಗೆ ಕೂಡಿಹಾಕಿ ಹೋಗಬೇಡ, ಈ ದೊಡ್ಡ ಪಂಜರದೊಳಗೆ ಬಂಧಿಸಿ ಹೊರಟು ಹೋಗಬೇಡ...." ಎಂಬ ತನ್ನ ಅಳಲುಗಳಿಗೆಲ್ಲಾ ಎಂದಿನದೇ ದಿವ್ಯನಿರ್ಲಕ್ಷ್ಯ ತೋರಿಸಿ ಹೊರಟು ಹೋಗಿದ್ದ....

ಅಂದಿನಿಂದ ಇಂದಿನವರೆಗೆ ತಾನು ಈ ಅರಮನೆಯೊಳಗೇ ಬಂದಿಯಾಗಿದ್ದೇನೆ, ಕ್ಷಣಕ್ಷಣಕ್ಕೂ ಉರಿಯುತ್ತಾ.... ಎಲ್ಲವನ್ನೂ ಕ್ಷಮಿಸಿಬಿಡಬಹುದಿತ್ತು .... ಎಲ್ಲವನ್ನೂ ಮರೆತುಬಿಡಬಹುದಿತ್ತು....ಮರೆತೂಬಿಟ್ಟೆನಲ್ಲ .... ಇವನು ವನವಾಸದಿಂದ ಮರಳಿ ಬಂದಾಗ ಅಳಿದುಳಿದ ಪ್ರೀತಿಯಿಂದಲೇ ಇವನನ್ನು ಸ್ವಾಗತಿಸಿದ್ದೆ.... ಈ ಊರ್ಮಿಳೆ ತನ್ನ ಬದುಕಿನಲ್ಲಿ ಯಾರಿಗೂ ಮೋಸಮಾಡಿಲ್ಲ, ತನಗೆ ಮೋಸಮಾಡಿದವರಿಗೂ ಸಹ. ಆದರೆ ಅವನಿಗೇ ತನ್ನೆದುರಿಗೆ ನಿಂತು ಕಣ್ಣೊಳಗೆ ಕಣ್ಣಿಟ್ಟು ಮಾತನಾಡುವ ಶಕ್ತಿ ಹೊರಟು ಹೋಗಿದೆ.... ಅದು ನನ್ನ ತಪ್ಪೆ ?.... ಎಲ್ಲವನ್ನೂ ಮರೆತರೂ ನೆನ್ನೆ ಇವನು ಮಾಡಿದ್ದಕ್ಕೆ ಕ್ಷಮೆಯೆಂಬುದಿದೆಯೆ ?....

"ಆರ್ಯಪುತ್ರ.... ಅಕ್ಕ ನಿನ್ನ ಅತ್ತಿಗೆಯಂತಲ್ಲದಿದ್ದರೂ ಒಬ್ಬ ಅಸಹಾಯಕ ಗರ್ಭಿಣಿ ಹೆಣ್ಣೆಂದಾದರೂ ರಕ್ಷಿಸುವುದು ನಿನ್ನ ಧರ್ಮವಲ್ಲವೋ?....ಕಾಡಿನಲ್ಲಿ ಯಾವುದೋ ಋಷಿ ಕೂಗಿದೊಡನೆ ರಕ್ಷಣೆಗೆ ಹೊರಡುವ ನಿನ್ನ ಕ್ಷತ್ರಿಯ ಧರ್ಮ ಏನಾಯಿತು....? " ತಾನು ಮತ್ತೆ ಮತ್ತೆ ಕೇಳಿದ್ದೆ. ಆ ಅಣ್ಣ ಒಬ್ಬ ಬಸುರಿ ಹೆಂಗಸನ್ನ ಕಾಡಿಗೆ ಬಿಟ್ಟು ಬಾ ಎಂದು ಹೇಳಿದನಂತೆ, ಈ ತಮ್ಮ ಕೇಳಿದನಂತೆ. ಭ್ರಾತೃಪ್ರೀತಿಯ ಭರದೊಳಗೆ ಧರ್ಮಾಧರ್ಮಗಳ, ಮಾನವೀಯತೆಯ ವಿವೇಚನೆಯೂ ಹೊರಟು ಹೋಗಬೇಕೆ ?....ಅಂದು ಲಕ್ಷ್ಮಣನ ತೋಟದಲ್ಲಿ ಅರಳುವ ಪ್ರತಿಯೊಂದು ಮೊದಲ ಹೂವು ಅಣ್ಣನದು ಎಂದವ ಅಂದೇ ಲಕ್ಷ್ಮಣನ ಹೆಂಡತಿಯನ್ನೂ ರಾಘವನಿಗೇ ಅರ್ಪಿಸಬಹುದಿತ್ತಲ್ಲ !....ಹುಂ!, ಅವನು ಸ್ವೀಕರಿಸುತ್ತಿದ್ದರೆ ಇವನು ಅದನ್ನೂ ಮಾಡುತ್ತಿದ್ದ.... ವ್ಯಂಗ್ಯವಾದುದೊಂದು ನಗೆ ತುಟಿಯಂಚಿನಲ್ಲಿ ಹಾದುಹೋಯಿತು....ಹುಂ!, 'ಶೈಲೂಷ'.... ;.... ಕಾಡಿಗೆ ಹೊರಟ ಸಂದರ್ಭದಲ್ಲಿ ಅಕ್ಕ ರಾಮನನ್ನು ಹೀಗೆ ಅಲ್ಲವೇ ಬೈಯ್ದದ್ದು....

"ಆರ್ಯಪುತ್ರ, ಅಣ್ಣನೆಂಬ ಪ್ರೀತಿಯೊಳಗೆ ನಿನಗೆ ನಿನ್ನ ಕರ್ತವ್ಯವೂ ಮರೆಯಾಗಬೇಕೆ ?" ತಾನು ಕನಲಿ ಕೇಳಿದ ಮಾತಿಗೆ ಆತ, "ಏನು ಮಾಡಬಹುದಿತ್ತು ದೇವಿ ? ನಾನು ಆ ಮಾತು ಕೇಳಿರದಿದ್ದರೆ ಅಣ್ಣ ಕೊರಳು ಕಡಿದುಕೊಳ್ಳುತ್ತಿದ್ದ...." ಎಂದುತ್ತರಿಸಿದ್ದನಲ್ಲವೆ? ಛೆ! ಅವನ ಒಂದು ಜೀವಕ್ಕಿಂತ ಅವಳಲ್ಲಿನ ಎರಡು ಜೀವ ದೊಡ್ಡದಲ್ಲವೆ ? ಕೊರಳು ಕಡಿದುಕೊಂಡರೆ ಕಡಿದುಕೊಳ್ಳುತ್ತಿದ್ದ ಎಂದು

ಒಂದು ಕ್ಷಣ ಉಕ್ಕಿ ಬಂದ ಸಿಟ್ಟಿನೊಳಗೆ ಊರ್ಮಿಳೆಗೆನ್ನಿಸಿತು. "ಲಕ್ಷ್ಮಣ, ವಂಶದ ಮರ್ಯಾದೆಗೋಸ್ಕರ ನಿನ್ನನ್ನಾದರೂ ಬಿಟ್ಟೇನು, ಭರತ ಶತ್ರುಘ್ನರನ್ನಾದರೂ ಬಿಟ್ಟೇನು, ಅಂಥದರಲ್ಲಿ ಸೀತೆಯನ್ನ.... ಬಿಡುವುದು ದೊಡ್ಡದಲ್ಲ. ಕೂಡಲೇ ಅವಳನ್ನ ಕಾಡಿಗೊಯ್ದು ಬಿಟ್ಟು ಬಾ" ಎಂದನಂತೆ ದಯಾಮಯಿ, ಬಹುಜನವತ್ಸಲ, ಕರುಣಾಪೂರ್ಣ ರಾಘವ ! ಅದಕ್ಕಿವನು ಒಪ್ಪಿಕೊಂಡು ಕಣ್ಣೀರು ಸುರಿಸುತ್ತಾ ಕಾಡಿಗೊಯ್ದು ಬಿಟ್ಟನಂತೆ.... ಛೆ!, ಈ ರಾಮನದು ಯಾವಾಗಲೂ ಇಂಥದ್ದೇ ಬುದ್ಧಿ.... ಸ್ವಯಂವರದಲ್ಲೇನೋ ದೊಡ್ಡದಾಗಿ ಶಿವಧನುಸ್ಸನ್ನು ಮುರಿದು ಬಿಟ್ಟ. ಇವಳು ವರಮಾಲೆ ಹಾಕಹೋದರೆ,

"ಒಂದು ಕ್ಷಣ ನಿಲ್ಲು ಸುಂದರಿ, ನನ್ನ ಪಿತನ ಆಜ್ಞೆ ಇಲ್ಲದೆ ಮದುವೆ ಮಾಡಿಕೊಳ್ಳಲಾರೆ ಎಂದೇಬಿಟ್ಟ. ಸ್ವಯಂವರಕ್ಕೆ ಪ್ರವೇಶಿಸಿದಾಗ ಇವನ ತಂದೆಯ ಆಜ್ಞೆ ಪಡೆದೇ ಪ್ರವೇಶಿಸಿದ್ದನೇ ? ಆಗ ತನ್ನ ಪಕ್ಕದಲ್ಲಿದ್ದ ಮಾಲಿನಿಯೇ ಪಿಸುಗುಟ್ಟಿದಳು.

"ಸ್ವಯಂವರವನ್ನೇ ಪ್ರವೇಶಿಸಿದ ಕೂಡಲ ಗೆದ್ದವನು ಮದುವೆಯಾಗಲೇಬೇಕೆಂಬ ಒಪ್ಪಂದ ಏರ್ಪಡುತ್ತದಲ್ಲವೇ ಒಡತಿ ?....ಆಗ ಇಲ್ಲದ ಅಪ್ಪನ ಆಜ್ಞೆ ಈಗೇಕೆ ಬೇಕಂತೆ?" ತನಗೂ ಹೌದೆನ್ನಿಸಿತ್ತು; ಒಂದುವೇಳೆ ಆ ವೃದ್ಧರಾಜ ಬೇಡವೆಂದಿದ್ದರೆ ಇವನು ಅವಳನ್ನು ಅಲ್ಲಿಯೇ ನಡುನೀರೊಳಗೇ ಕೈಬಿಡುತ್ತಿದ್ದನೆ ?.... ಅಪ್ಪನ ಆಜ್ಞೆಗೆ ಏನನ್ನೂ ಮಾಡಲು ತಯಾರಿರುವ ಇವನು ಅದನ್ನೂ ಮಾಡಿಯೇ ತೀರುತ್ತಿದ್ದನೆನಿಸಿ ಅಸಹ್ಯ ಉಕ್ಕಿಬಂತು. "ಅಯ್ಯೋ, ಈ ಕ್ಷತ್ರಿಯ ಕುಲದ, ರಘುವಂಶದ ರಾಜರೇ, ನಿಮ್ಮ ಕುಲದ ಮರ್ಯಾದೆ, ಪೊಳ್ಳು ಕೀರ್ತಿಗಳಿಗಿಂತ ಅವಳ ಗರ್ಭದೊಳಗೆ ಮೊಳೆಯುತ್ತಿರಬಹುದಾದ ಒಂದು ಚಿಗುರು ಈ ಸೃಷ್ಟಿಗೆ ಹೆಚ್ಚು ಮುಖ್ಯವಾಗಿದೆ.... ಹೆಚ್ಚು ಮುಖ್ಯವಾಗಿದೆ...." ಎಂದು ಚೀರಬೇಕೆನ್ನಿಸಿತು....

ಹಿಂದಿನಿಂದ ಹೆಜ್ಜೆಗಳ ಶಬ್ದ....ಸುತ್ತಲೂ ನೋಡುತ್ತಾಳೆ, ಆಗಲೇ ಕತ್ತಲೆ ಮುಸುಗಿದೆ.... ಬೆಳಗಿನಿಂದಲೂ ಹೀಗೆಯೇ ಇಲ್ಲೇ ಕುಳಿತಿದ್ದೇನೆ ಎಂಬುದು ನೆನಪಿಗೆ ಬಂತು.... ಅರೆ, ಎಷ್ಟೊಂದು ನೆನವುಗಳು....

"ಒಡತಿ, ಕತ್ತಲಾದ ಮೇಲೆ ತೋಟದಲ್ಲಿ ಕೂಡುವುದು ಸರಿಯಲ್ಲ....ಏನಾದರೂ ಹುಳಹುಪ್ಪಟೆ....ಹಾವು...." ಭುಜದ ಮೇಲೆ ನವಿರಾದ ಹಸ್ತಸ್ಪರ್ಶ.... ಹಿಂತಿರುಗಿ ನೋಡುತ್ತಾಳೆ, ದೀಪದ ಬೆಳಕಲ್ಲಿ ಮಾಲಿನಿಯ ಮುಖ.

ಏತಕ್ಕೋ ಬೆಳಗಿನಿಂದ ಒತ್ತಿಟ್ಟ ದುಃಖವೆಲ್ಲ ಆ ಕ್ಷಣದಲ್ಲಿ ಕಟ್ಟೆಯೊಡೆಯುತ್ತದೆನ್ನಿಸಿತು... ಅಸಹಾಯಕತೆಯ ಕೋಪಕ್ಕೆ ...."ಈ ಊರ್ಮಿಳೆಯನ್ನು ಯಾವುದೂ ಏನೂ ಮಾಡುವುದಿಲ್ಲ ಮಾಲಿನಿ.... ಹಾವು ಕಡಿದು ಸಾಯುವಷ್ಟು ಅದೃಷ್ಟವಂತೆ ನಾನಲ್ಲ...." ಮಾತು ಚಿಮ್ಮಿಬಂದಿತ್ತು, ಮಾಲಿನಿ ಮರುಮಾತನಾಡದೆ ಭುಜದ ಸುತ್ತಲೂ ಕೈ ಹಾಕಿ ಒಡತಿಯನ್ನು ಮಗುವಿನ ಹಾಗೆ ತನ್ನೆದೆಗೆ ಒರಗಿಸಿಕೊಂಡು ಅರಮನೆಯೊಳಗೆ ಕರೆತಂದಳು.. 'ಒಡತಿಯದು ಯಾವಾಗಲೂ ಸುಖ ಅನುಭವಿಸಿದ ಜೀವವಲ್ಲ.... ಕೆಲವರ ಹಣೆಯಲ್ಲಿ ಬ್ರಹ್ಮದೇವ ಬರೀ ಕಷ್ಟವನ್ನೇ ಬರೆದಿರುತ್ತಾನಂತೆ, ಅಂಥವರಲ್ಲಿ ಇವಳೂ ಒಬ್ಬಳು.. '

ಒಳ ಪ್ರಾಕಾರದೊಳಗೆ ಬರುವಷ್ಟರಲ್ಲಿ ದುಃಖ ಒಂದಿಷ್ಟು ಸ್ಥಿಮಿತಕ್ಕೆ ಬಂದಹಾಗೆನ್ನಿಸಿತು. ಅಂತಃಪುರದ ಅಗಲ ಮಂಚದ ಮೇಲೆ ಮೈಯೊರಗಿಸಿದ ಕ್ಷಣಕ್ಕೆ ಲಕ್ಷ್ಮಣನ ಮೇಲಿನ ಅಸಹ್ಯ ಇನ್ನೂ ಪೂರ್ಣವಾಗಿ ಉಕ್ಕಿ ಬಂದಿತು. ಒಂದುಕ್ಷಣ ವಿಶಾಲವಾದ ಅ ಮಂಚವನ್ನು ದಿಟ್ಟಿಸುತ್ತಾಳೆ.... ಎಷ್ಟೊಂದು ವ್ಯರ್ಥವಾಯಿತಲ್ಲ.... ತನ್ನ ವರ್ಷವರ್ಷಗಳ ಯವ್ವನ ಇವನ ಆದರ್ಶದ ನೆರಳಲ್ಲಿ ಮಣ್ಣುಗೂಡಿತಲ್ಲ....ಒಂದಲ್ಲ ಎರಡಲ್ಲ ಹದಿನಾಲ್ಕು ವರ್ಷಗಳು.... ತನ್ನ ಹೊಟ್ಟೆಯಲ್ಲಿ ಒಂದು ಕುಡಿಯಾದರೂ ಮೂಡಿದ್ದಿದ್ದರೆ.... ಹುಂ, ಎಲ್ಲಕ್ಕೂ ಲಭ್ಯವಿರಬೇಕು.... ತನಗೆ ಮೊದಲಿನಿಂದಲೂ ಮಕ್ಕಳ ಮೇಲೆ ಆಸೆ.... ಒಂದಲ್ಲ, ಎರಡಲ್ಲ, ಎಂಟು ಹತ್ತು ಮಕ್ಕಳನ್ನು ಹಡೆಯುವ ಬಯಕೆ... ಆದರೆ ಲಕ್ಷ್ಮಣ ಈ ಗರ್ಭದೊಳಗೆ ಒಂದು ಕುಡಿಯನ್ನೂ ಬಿತ್ತಲಿಲ್ಲ....

"ಒಡತಿ ನಿನಗೇನು ಮಕ್ಕಳಾಗುವ ವಯಸ್ಸು ಮೀರಿಲ್ಲ, ಇಂದಲ್ಲ ನಾಳೆ ನಾಲ್ಕು ಮಕ್ಕಳಾದಾವು" ಇವಳ ನಿಟ್ಟುಸಿರಿನ ಮರ್ಮವನ್ನರಿತವಳಂತೆ ಮಾಲಿನಿ ನುಡಿದಳು....

ಇವಳಗೆ ಹೇಗೆ ಹೇಳಲಿ.... ಇವಳಿಗೆ ಎಲ್ಲವನ್ನೂ ಹೇಗೆ ಬಿಡಿಸಿ ಹೇಳಲಿ....ಅವನನ್ನು ನೋಡಿದರೇ ಉಕ್ಕುವ ಅಸಹ್ಯದೊಳಗೆ ಅವನ ಶಿಶುವನ್ನು ಈ ಗರ್ಭದೊಳಗೆ

ಹೇಗೆ ಹೊರಲಿ....ಒಂದು ದಿನ ಊರ್ಮಿಳೆಯ ಎರಡೂ ರೆಕ್ಕೆಗಳೂ ಸರಿಯಾಗಿದ್ದ ದಿನ ತನ್ನ ಪ್ರೀತಿಯ ನಭದೊಳಗೆ ರೆಕ್ಕೆ ಬಿಚ್ಚಲು ಬಿಡದೆ....ವರ್ಷವರ್ಷಗಳ ನಂತರ ಹಾರಲು ಬಿಟ್ಟಾಗ ತನ್ನ ರೆಕ್ಕೆಗಳಿಗೆ ಹಾರುವ ಶಕ್ತಿ ಇಲ್ಲವಾಗಿದೆ....ಇಲ್ಲ, ಲಕ್ಷ್ಮಣನನ್ನ ಪ್ರೀತಿಸಲಾರೆ, ಇನ್ನೆಂದೆಂದಿಗೂ ...

"ಒಡತಿ ಬೆಳಗಿನಿಂದ ಏನನ್ನೂ ತಿಂದಿಲ್ಲ....ಇಗೋ ಈ ಹಾಲನ್ನಾದರೂ ಕುಡಿ.."ಮಾಲಿನಿಯ ದನಿ ಕೇಳಿಸುತ್ತದೆ..

"ಮಾಲಿನಿ, ಆ ಹಾಲನ್ನು ಅಲ್ಲಿಟ್ಟು ಇಲ್ಲಿ ಬಾ...." ಏತಕ್ಕೊ ತನ್ನ ಜೀವನದ ಎಲ್ಲ ಏಳುಬೀಳುಗಳನ್ನ ಕಂಡ ಈ ವೃದ್ಧ ಜೀವನದ ಮುಂದೆ ತನ್ನ ಅಳಲುಗಳನ್ನು ಹೇಳಿಕೊಳ್ಳಬೇಕನ್ನಿಸುತ್ತದೆ.

ಮಾಲಿನಿ, ನೀನೇ ಹೇಳು, ನಿನ್ನ ಆರ್ಯಪುತ್ರ ಅಣ್ಣನ ಮಾತನ್ನು ಪಾಲಿಸುವ ಭರದೊಳಗೆ ಗರ್ಭಿಣಿ ಹೆಂಗಸೊಬ್ಬಳನ್ನು ಕಾಡಿಗೆ ಬಿಟ್ಟು ಬಂದದ್ದು ಸರಿಯೆ ?....ಹೇಳು ಮಾಲಿನಿ, ಈ ತಪ್ಪಿನ ನಂತರವೂ ಇವನನ್ನು ನಾನು ಕ್ಷಮಿಸಬಹುದೆ....ಹೇಳು...." ಮಾಲಿನಿ ಮೌನವಾಗುತ್ತಾಳೆ. ಆ ಸುಕ್ಕುಗಟ್ಟಿದ ಹಣೆಗಳುಗಳು ತನ್ನ ಹಣೆಯ ಮೇಲೆ ತೈಲವನ್ನು ಉಜ್ಜುತ್ತಿದ್ದಂತೆ ಕಳೆದು ಹೋದ ತಾಯಪ್ರೀತಿ ನೆನಪಾಗುತ್ತದೆ ಊರ್ಮಿಳೆಗೆ.

"ಮಹಾರಾಣಿ, ಮಹಾರಾಜ ಮಾಡಿದ್ದು ಸರಿಯೋ ತಪ್ಪೋ ನಿರ್ಧರಿಸುವವಳು ನಾನಲ್ಲ, ಯಾಕೆಂದರೆ ಆಯಾ ವ್ಯಕ್ತಿಗಳ ನಡವಳಿಕೆ ಆಯಾ ಸಂಧರ್ಬಗಳ ಮೇಲೆ ಅವಲಂಬಿತವಾಗಿರುತ್ತದೆ....ಆದರೆ ನೆನ್ನೆಯಿಂದ ನನ್ನನ್ನು ಕಾಡುತ್ತಿರುವುದು ಒಂದು ಪ್ರಶ್ನೆ....ಸಂಕೋಚವಿಲ್ಲದೆ ಕೇಳಲೆ ?

"ಕೇಳು ಮಾಲಿನಿ, ಈ ಊರ್ಮಿಳೆಯ ಬದುಕಿನ ಉದ್ದಗಲಗಳನ್ನು ಬಲ್ಲವಳು ನೀನು..ಏನು ಪ್ರಶ್ನೆಯಿದ್ದರೂ ಸಂಕೋಚವಿಲ್ಲದೆ ಕೇಳಿಬಿಡು...."

"ನೆನ್ನೆಯದಿನ ಒಬ್ಬಳೇ ಬಸುರಿಯನ್ನು ಕಾಡಿಗೆ ಬಿಟ್ಟು ಬಿಡಹೊರಟ ಮಹಾರಾಜನನ್ನು ಅಷ್ಟೊಂದು ನಿಂದಿಸಿದೆಯೆಲ್ಲ ಮಹಾರಾಣಿ, ಸೀತೆಯ ಜೊತೆಗೆ ನೀನೇ ಹೊರಡಬಹುದಿತ್ತಲ್ಲ ... ಹೇಗಿದ್ದರೂ ಕಾಡು-ನಿಸರ್ಗ ನಿನಗೆ ಪ್ರಿಯವಲ್ಲ....ಅಥವ ಹೋಗುವುದು ಸಾಧ್ಯವಿಲ್ಲದಿದ್ದಲ್ಲಿ ಋಷ್ಯಾಶ್ರಮಕ್ಕೆ ಹೊರಡುತ್ತೇನೆಂದು ತಪ್ಪು ತಿಳಿದವಳಿಗೆ ನಿಜವನ್ನಾದರೂ ತಿಳಿಸಬಹುದಿತ್ತಲ್ಲ....ಯಾಕೆ ಯಾವುದನ್ನೂ ಮಾಡಲಿಲ್ಲ....?!"

"ಊರ್ಮಿಳೆಗೆ ಒಮ್ಮೆ ಗಲಿಬಿಲಿಯಾಯಿತು....ಹೌದು, ಅಕ್ಕನ ಸಂಗಡ ತಾನೇಕೆ ಹೊರಡಲಿಲ್ಲ....?!....ಯೋಚಿಸಬೇಕೆನ್ನಿಸಿತು.

"ಮಾಲಿನಿ....ಈ ಪ್ರಶ್ನೆಗೆ ಯೋಚಿಸಿಯೇ ಉತ್ತರಿಸಬೇಕು....ನನ್ನನ್ನು ಸ್ವಲ್ಪ ಒಂಟಿಯಾಗಿ ಬಿಟ್ಟುಹೋಗು.... ಯಾರು ಬಂದರೂ ಬಿಡಬೇಡ...." ಬಾಗಿಲನ್ನೆಳೆದುಕೊಂಡು ಅವಳು ನಿಶ್ಯಬ್ದವಾಗಿ ಹೊರಟು ಹೋದ ಮೇಲೆ ಪ್ರಶ್ನೆ ಭೂತಾಕಾರವಾಗಿ ಕಾಡತೊಡಗಿತು...."ಹೌದು ಅಕ್ಕನ ಜೊತೆ ಹೋಗಲಿಲ್ಲ....?" ಏಕೋ ಪ್ರಶ್ನೆಗೆ ಉತ್ತರ ಹೊಳೆಯುವುದಿಲ್ಲವೆನ್ನಿಸಿತು; ಋಷ್ಯಾಶ್ರಮಕ್ಕೆ ಹೋಗುತ್ತಿದ್ದೇನೆಂದು ತಪ್ಪು ತಿಳಿದವಳಿಗೆ ನಿಜ ತಿಳಿಸಬೇಕೆಂದು ತನಗೂ ಅನ್ನಿಸಿತ್ತು. ಆದರೆ ನಿಜ ಅರಿತು ಅವಳೇನು ಮಾಡಿಯಾಳು, ಅತ್ತಾಳು, ಕರೆದಾಳು....ಆದರೆ ರಘು ವಂಶದ ಈ ಮಹನೀಯರುಗಳ ಎದೆ ಹೆಣ್ಣಿನ ಕಣ್ಣೀರಿಗೆ ಕರಗುವಂಥದಲ್ಲ....

ಕಲ್ಲಾಗಿದ್ದ ಅಹಲ್ಯೆಯನ್ನು ಮನುಷ್ಯಳನ್ನಾಗಿಸಬಲ್ಲ ಮಹಾಪುರುಷ ಸೀತೆಯ ಮುಂದೆ ತಾನೇ ಕಲ್ಲಾಗುತ್ತಾನೆ ಎಂಬ ಕ್ರೂರವಾಸ್ತವದ ಅರಿವಿದ್ದೇ ಅವಳಿಗೆ ತಾನು ಸತ್ಯವನ್ನು ತಿಳಿಸಲಿಲ್ಲ....ಆದರೆ ಅಕ್ಕನ ಜೊತೆಗೇ ತಾನು ಹೊರಡುತ್ತೇನೆಂದು ಏಕೆ ಹಟ ಹಿಡಿಯಲಿಲ್ಲ....

ಬೆಳಗಿನಿಂದ ಯೋಚಿಸಿ ಯೋಚಿಸಿ ಮೆದುಳಿನ ನರಗಳೆಲ್ಲ ಸಿಡಿಯತೊಡಗಿದವು ಅನ್ನಿಸಿತು.... ಹಾಗೇ ಜೊಂಪು ಹತ್ತಿದಂತಾಗಿ ಕಣ್ಣು ಮುಚ್ಚಿದಳು .... ಮತ್ತೆ ಎಚ್ಚರಾದದ್ದು ಮಾಲಿನಿಯ ಗಾಬರಿಯ ದನಿಗೆ....

ಒಡತಿ....ಒಡತಿ....ಬೇಗ ಎದ್ದೇಳಿ....ನೀವು ನೆನ್ನೆ ಪಂಜರದಿಂದ ಹೊರಬಿಟ್ಟ ಗಿಳಿಗಳನ್ನು...." ಅವಳು ವಾಕ್ಯವನ್ನು ಪೂರ್ಣಗೊಳಿಸುವ ಮುನ್ನವೇ ಎಲ್ಲವೂ ಅರಿವಾದಂತಾಗಿ ಮಂಚದಿಂದೆದ್ದು ಓಡಿದಳು. ಜಾರುವ ವಸ್ತ್ರಗಳನ್ನು ಲೆಕ್ಕಿಸದೆ ಓಡಿ ಓಡಿ ಅಂಗಳಕ್ಕೆ ಬರುವಾಗ ನಿರೀಕ್ಷಿಸಿದ್ದು ಸತ್ಯವಾಗಿಯೇ ಬಿಟ್ಟಿತ್ತು....

ನೆನ್ನೆ ತಾನೆ ನೀಲನಭದ ಅಖಂಡತೆಯನ್ನೆಲ್ಲ ಅಳೆದು ಬಿಡಲಿ ಎಂದು ತಾನು ಪಂಜರದ ಬಾಗಿಲುಗಳಿಂದ ಬಿಡುಗಡೆಗೊಳಿಸಿದ್ದ ಗಿಳಿಗಳೆಲ್ಲ....ತಾನೇ ಸಾಕಿದ ಅರಮನೆಯ ಬೆಕ್ಕುಗಳಿಗೆ ಸಿಕ್ಕಿ.... ರೆಕ್ಕೆ ಒಂದು ಕಡೆ....ಪುಕ್ಕ ಒಂದು ಕಡೆ....ಊರ್ಮಿಳೆಗೆ ವಾಂತಿ ಬಂದಂತಾಗಿ ಬದಬದನೆ ವಾಂತಿ ಮಾಡಿದಳು, ಮುಂದೆ ಹರಡಿಕೊಂಡ ವಾಂತಿ.... ಚಲ್ಲಾಪಿಲ್ಲಿ ರಕ್ತ–ರೆಕ್ಕೆ–ಪುಕ್ಕಗಳೆಲ್ಲವೂ ಕಣ್ಣಮುಂದೆ ಭೂತನೃತ್ಯ ಮಾಡತೊಡಗಿದವು. ಮೆಲ್ಲಗೆ ಎದ್ದು ಅರಮನೆಯೊಳಕ್ಕೆ ನಡೆಯುವಾಗ ಏಕೋ ವರ್ಷ ವರ್ಷಗಳ ಮುದಿತನ ಆವರಿಸಿಬಿಟ್ಟಹಾಗೆ, ಎರಡೂ ಹೆಗಲುಗಳ ಮೇಲೂ ಎರಡು ಹಿಮಾಲಯಗಳನ್ನು ಹೊರಸಿದ ಹಾಗೆ ಭಾಸವಾಗತೊಡಗಿತು........

* * *

ಸಂಜೆಯ ಹೊತ್ತು ಬಂದು,

"ನಾನು ಮಾಡಿದ ಅಪರಾಧಕ್ಕೆ ಕ್ಷಮೆಯಿಲ್ಲವೆಂದು ಗೊತ್ತು....ಆದರೂ ಕ್ಷಮಿಸಿಬಿಡಲು ಪ್ರಯತ್ನಿಸು ದೇವಿ" ಎಂದ ಲಕ್ಷ್ಮಣನ ಮುಖವನ್ನೊಮ್ಮೆ ದಿಟ್ಟಿಸುತ್ತಾಳೆ. ಆ ನೀಲಿ ಕಣ್ಣುಗಳಲ್ಲಿನ ತೀಕ್ಷ್ಣತೆಗೆ ಮುಖ ಮುಚ್ಚಿಕೊಳ್ಳಬೇಕೆನಿಸಿತು. ಲಕ್ಷ್ಮಣನಿಗೆ" "ದೇವಿ, ನಿನ್ನ ಕಣ್ಣುಗಳು ಮಾತನಾಡುವುದಿಲ್ಲ, ಬರೀ ದಿಟ್ಟಿಸುತ್ತಿವೆ ದೇವಿ, ಎದುರಿಗಿದ್ದವರು ವಿಲಿವಿಲಿ ಒದ್ದಾಡುವ ಹಾಗೆ ದಿಟ್ಟಿಸುತ್ತವೆ...." ಎಂದು ತಾನೊಮ್ಮೆ ಹೇಳಿದ್ದು ಲಕ್ಷ್ಮಣನಿಗೆ ನೆನಪಿಗೆ ಬಂತು.

ಕಿಟಕಿಯ ಸರಳುಗಳಿಂದ ಆಚೆ ಆಗಸವನ್ನು ದಿಟ್ಟಿಸುತ್ತಿದ್ದ ಊರ್ಮಿಳೆಗೆ ಒಮ್ಮೆಲೇ ಮಾಲಿನಿಯ ಪ್ರಶ್ನೆಗೆ ಉತ್ತರ ಹೊಳೆದುಬಿಟ್ಟಿತು...ವರ್ಷವರ್ಷಗಳ ಬಂಧನದಿಂದ ಆಚೆ ಬಂದ ಗಿಳಿಗಳಿಗೆ ಸಾವೇ ಗತಿಯಾಯಿತು. ಬಂಧನದಿಂದಾಚೆ ಅವುಗಳಿಗೆ ಬದುಕಿಲ್ಲ....ಅದೇ ಪರಿಸ್ಥಿತಿ ತನ್ನದು....ಅರಮನೆಯ ಗೋಡೆಗಳಿಗೆ ಎಷ್ಟೊಂದು ಹೊಂದಿಕೊಂಡುಬಿಟ್ಟೆ ಅಂದರೆ....ಸೆರೆಮನೆಯ ಬಿಸಿಗಾಳಿಗೆ ಎಷ್ಟೊಂದು ಸ್ಪಂದಿಸಿ ಬಿಟ್ಟೆ ಎಂದರೆ ಕಾಡಿನ ತಂಗಾಳಿಯೂ ತನಗೆ ಬದುಕು ನೀಡುವುದಿಲ್ಲ. ಈ ಊರ್ಮಿಳೆ ಅರಮನೆಯೊಳಗೂ ಕಾಡೊಳಗೂ ಅದೇ ವಿಕ್ಷಿಪ್ತ ಊರ್ಮಿಳೆಯಾಗಿ ಉಳಿದು ಬಿಡುತ್ತಾಳೆ.

ಲಕ್ಷ್ಮಣ ಹೊರಟು ಹೋದ ಬಹಳ ಹೊತ್ತಿನವರೆಗೂ ಕಿಟಕಿಯ ಸರಳುಗಳ ಹಿಂದೆ ಊರ್ಮಿಳೆ ನಿಂತೇ ಇದ್ದಳು. ಸತ್ತು ಬಿದ್ದ ಗಿಳಿಗಳ ರಕ್ತರಾವಾಗಿ ಕಣ್ಣಮುಂದೆ ರಾಚುತಿತ್ತು............

Statement about Ownership and other particulars about Newspaper ACHALA

FORM IV (See Rule 8)

1	Place of Publication	:	Bangalore, Karnataka State
2	Periodicity of its Publication	:	Bi-Monthly
3	Printers Name	:	Dr.G. Ramakrishna for Printswell Bangalore
	Nationality	:	Indian
	Addres	:	221, IV Main Road Vyalikaval, Bangalore-3
4	Publisher's Name	:	Dr. G. Ramakrishna for Jagruthi Mahila Adhyana Kendra Bangalore
	Nationality	:	Indian
	Address	:	221, IV Main Road Vyalikaval, Bangalore-3
5	Editor's Name	:	N. Gayathri
	Nationality	:	Indian
	Address	:	221, IV Main Road Vyalikaval, Bangalore-3
6	Name & Address of individuals who own the Newspaper	:	Dr. G. Ramakrishna 221, IV Main Road Vyalikaval Bangalore-560 003

I, Dr. G. Ramakrishna, here by declare that the particulars given above are true to the best of my knowledge and belief

Bangalore — Sd/-

Date : 1-3-1989 — Dr. G. Ramakrishna

ಮೇರಿ ವುಲ್‌ಸ್ಟನ್ ಕ್ರಾಫ್ಟ್
ಒಂದು ಪರಿಚಯ

ಹದಿನೆಂಟನೆಯ ಶತಮಾನದ ಇಂಗ್ಲೆಂಡಿನ ಸಾಮಾಜಿಕ ಜೀವನ ಹಾಗೂ ಸಾಹಿತ್ಯಕ ಚಟುವಟಿಕೆಗಳಲ್ಲಿ ತನ್ನ ವಿಶಿಷ್ಟ ಪ್ರಭಾವವನ್ನು ಬೀರಿ, ಸಾಕಷ್ಟು ಆಪಾದನೆ-ದೂಷಣೆಗಳನ್ನೆದುರಿಸಬೇಕಾಗಿ ಬಂದರೂ ಜಗ್ಗದೆ, ಮಹಿಳೆಯ ಸ್ಥಾನಮಾನಗಳಿಗಾಗಿ ಅವಿರತವಾಗಿ ಹೋರಾಟ ನಡೆಸಿದ ದಿಟ್ಟ ವ್ಯಕ್ತಿ—ಮೇರಿ ವುಲ್‌ಸ್ಟನ್ ಕ್ರಾಫ್ಟ್. ಅಂದಿನ ರಾಜಕೀಯ ತತ್ವಶಾಸ್ತ್ರ ಕ್ಷೇತ್ರದ ಪ್ರಮುಖ ಚಿಂತಕ ವಿಲಿಯಂ ಗಾಡ್‌ವಿನ್ ಆಕೆಯನ್ನು ಮದುವೆಯಾದಾಗ ಸಮಾಜದ ಅನೇಕ ಶಕ್ತಿಗಳು ಅವರಿಬ್ಬರಿಗೂ ಶಾಪ ಹಾಕಿದರು. ಪತ್ರಿಕೆಗಳಲ್ಲಿ ಛೀಮಾರಿಗಂತೂ ಲೆಕ್ಕವೇ ಇಲ್ಲ. ಇವರಿಬ್ಬರ ಮಗಳು ಮೇರಿ ಗಾಡ್‌ವಿನ್ ನಂತರದ ವರ್ಷಗಳಲ್ಲಿ ಖ್ಯಾತ ಇಂಗ್ಲಿಷ್ ಕವಿ ಶೆಲ್ಲಿಯೊಡನೆ ಪರಾರಿಯಾಗಿ ಆಮೇಲೆ ಅವನಿಂದ ತ್ಯಜಿಸಲ್ಪಟ್ಟಳು. ಆಕ್ಸ್‌ಫರ್ಡ್‌ನಲ್ಲಿ ವಿದ್ಯಾರ್ಥಿಯಾಗಿದ್ದಾಗ "ನಾಸ್ತಿಕತೆಯ ಅವಶ್ಯಕತೆ" ಎಂಬ ಕಿರು ಹೊತ್ತಿಗೆ ಬರೆದು ಕಾಲೇಜಿನಿಂದ ಹೊರದೂಡಲ್ಪಟ್ಟ ಹುರುಪಿನ ಚಿಂತಕ ಶೆಲ್ಲಿ. ವಿಲಿಯಂ ಗಾಡ್‌ವಿನ್‌ನನ್ನು ವಿವಾಹವಾಗುವ ಮೊದಲು ಮೇರಿ ಒಬ್ಬ ಅಮೇರಿಕದ ಕೆಟ್ಟ ಸಾಹಿತಿ ಇಮ್ಲೆ ಎಂಬುವವನನ್ನು ಪ್ರೇಮಿಸಿ ಅವನಿಂದ ಬೇಕಾದಷ್ಟು ಸಂಕಷ್ಟಗಳನ್ನು ಅನುಭವಿಸಿದ್ದಳು. ಮಹಿಳಾ ಪ್ರಶ್ನೆಯನ್ನು ಗಂಭೀರವಾಗಿ ಎತ್ತಿದ ಆದ್ಯಪ್ರವರ್ತಕರಲ್ಲಿ ಈಕೆಯದು ಮಹತ್ವದ ಸ್ಥಾನ.

ಫ್ರಾನ್ಸಿನ ತತ್ವಜ್ಞಾನಿ ರೂಸೋ ಹೆಸರು ಬಹಳ ಪ್ರಚಲಿತವಾಗಿದೆ. ಅವನೊಬ್ಬ ಅಮೋಘ ದಾರ್ಶನಿಕನೆಂಬ ಐತಿಹ್ಯ ನಮ್ಮ ಬೌದ್ಧಿಕ ಪ್ರಪಂಚದಲ್ಲಿ ಕೇಳಿ ಬರುತ್ತದೆ. ನಾಗರಿಕತೆಯ ಚರ್ಚೆ ನಡೆಯುವಾಗಂತೂ ಅವನ ಆದರ್ಶ, ಪ್ರಕೃತಿಯ ಬಗೆಗಿನ ವ್ಯಾಮೋಹ, ಇತ್ಯಾದಿಗಳನ್ನು ಒತ್ತಿ ಹೇಳಲಾಗುತ್ತದೆ. ಫ್ರಾನ್ಸಿನ ಕ್ರಾಂತಿಕಹಳೆಗೆ ಈತನ ಪ್ರೇರಣೆಯೂ ಇತ್ತೆಂಬ ಇನ್ನೊಂದು ವಾದವೂ ಇದೆ. ಆದರೆ ಈತ ಎಂತಹ ಕುತ್ಸಿತ ಮಹಿಳಾ ದ್ವೇಷಿಯಾಗಿದ್ದನೆಂಬುದು ಅಷ್ಟಾಗಿ ಪ್ರಚಾರದಲ್ಲಿಲ್ಲ. ಶುದ್ಧ ಅತಾರ್ಕಿಕ ಮಾತುಗಳಲ್ಲಿ ಅವನು ಸ್ತ್ರೀಯರ ಬಗ್ಗೆ ಕಟುವಾಗಿ ಬರೆದು ತನ್ನ ಮಾನಸಿಕ ಕಶ್ಮಲವನ್ನು ಬಹಿರಂಗಗೊಳಿಸಿಕೊಂಡಿದ್ದಾನೆ. ಅಂತಹ ವ್ಯಕ್ತಿಯೆದುರು ನಿಂತು ವಾದ ಮಾಡಿ ಕೆಲವರಿಂದಲಾದರೂ ಶ್ಲಾಘನೆ ಪಡೆದವಳು ಮೇರಿ.

ಹದಿನೆಂಟನೆಯ ಶತಮಾನದ ಜಡ್ಡುಗಟ್ಟಿದ ಧಾರ್ಮಿಕ ಪಾಳೆಯಗಾರತನ ಮತ್ತು ಸಾಮಾಜಿಕ ಕುಟಿಲತೆಗಳ ನಡುವೆ ತನ್ನ ಸ್ವರವನ್ನು ಎತ್ತರಕ್ಕೆ ಎತ್ತಿದ ಮೊದಲ ಮಹಿಳೆ ಮೇರಿ ಎಂಬುದನ್ನು ಗಮನಿಸಿದರೆ ಬಹುಶಃ ಅವಳ ಹಿರಿತನ ಗೊತ್ತಾದೀತು. ಇಪ್ಪತ್ತೊಂದನೆಯ ಶತಮಾನಕ್ಕೆ ಸಮೀಪವಿರುವ ನಮಗೆ ಆಕೆಯ ಅಭಿಪ್ರಾಯ ಹಾಗೂ ನಡೆವಳಿಕೆ ವಿಸ್ಮಯವೆನಿಸದಿರಬಹುದು. ಆದರೆ ತನ್ನ ಸಮಕಾಲೀನ ಬದುಕಿನಲ್ಲಿ ಬಿರುಗಾಳಿಯನ್ನೆಬ್ಬಿಸಿದ್ದ ಖ್ಯಾತಿ ಇವಳದು. ಎಡ್ಮಂಡ್ ಬರ್ಕ್ ಆಗ್ಗೆ ಬ್ರಿಟನ್ನಿನ ಪಾರ್ಲಿಮೆಂಟಿನಲ್ಲಿ ಹೆಸರು ಮಾಡಿದ್ದ ಒಬ್ಬ ಮಹಾ ಮಾತುಗಾರ. ಅಮೆರಿಕಾದ ಸ್ವಾತಂತ್ರ್ಯ ಯುದ್ಧ ಮತ್ತು ಫ್ರಾನ್ಸಿನ ಕ್ರಾಂತಿ,—ಎರಡನ್ನೂ ಕಟ್ಟುನಿಟ್ಟಾಗಿ ವಿರೋಧಿಸಿದ್ದ ಕಟ್ಟಾ ಸಂಪ್ರದಾಯವಾದಿ. ಮಹಿಳೆಯ ಬಗ್ಗೆ ತುಚ್ಛವಾದ ಕಲ್ಪನೆಗಳನ್ನಿರಿಸಿಕೊಂಡಿದ್ದ ಉಗ್ರ ಮಧ್ಯಕಾಲೀನ ತಲೆಯ ರಾಜಕೀಯ ಮುತ್ಸದ್ದಿ. ಅವನನ್ನು ಧಿಕ್ಕರಿಸಿ ರಾಜಕೀಯ ಮತ್ತು ಸಾಹಿತ್ಯ ವಲಯಗಳಲ್ಲಿ ಖ್ಯಾತಿ ಪಡೆದವಳು ಮೇರಿ. ಥಾಮಸ್ ಪೇನ್‌ನಂತಹ ಚಿಂತಕನೊಡನೆ ನೇರ ಸಂಪರ್ಕ ಬೆಳೆಸಿ ತನ್ನ ಬೌದ್ಧಿಕ ದಿಗಂತವನ್ನು ವಿಸ್ತರಿಸಿಕೊಂಡಿದ್ದವಳು ಈಕೆ.

1759ರಲ್ಲಿ ಜನಿಸಿದ ಮೇರಿ ಆರ್ಥಿಕ ಕಾರಣಗಳಿಂದಾಗಿ ಮೊದಲಿನಿಂದಲೂ ಸ್ವಾವಲಂಬನೆಯಿಂದಲೇ ಜೀವಿಸಬೇಕಾಗಿ

ಬಂದವಳು. ತನ್ನ 19ನೇ ವಯಸ್ಸಿನಲ್ಲಿ ಶ್ರೀಮತಿ ಡಾಸನ್ ಎಂಬ ಶ್ರೀಮಂತ ಮಹಿಳೆಯ ಸಹಚರಳಾಗಿ ಬಾತ್ ಎಂಬಲ್ಲಿನ ಆರೋಗ್ಯಧಾಮಕ್ಕೆ ಹೋಗಿದ್ದಳು. ಅಲ್ಲಿ ತನ್ನ ಸ್ವಗೌರವದ ಪ್ರಶ್ನೆ ಬಂದಾಗ ಎಂತಹ ಕಷ್ಟ ನಿಷ್ಠೂರ ಬಂದರೂ ಶ್ರೀಮಂತಿಕೆಗೆ ಮಾರು ಹೋಗದ, ಕೆಲಸ ಬಿಟ್ಟು, ಅನಿಶ್ಚಯದ ಪರಿಸರದಲ್ಲಿ ನಿಲ್ಲಲು ಅಂಜಲಿಲ್ಲ. ತನ್ನೆಲ್ಲ ಹೋರಾಟಗಳೂ ಬೇರೊಂದು ಆಳವಾದ ರಾಜಕೀಯ ಸಾಮಾಜಿಕ ಹೋರಾಟದ ಭಾಗವೆಂದು ತರ್ಕಿಸಿ ಟೊಂಕಕಟ್ಟಿ ನಿಂತಳು. ತನ್ನ ಸ್ನೇಹಿತೆ ಫ್ಯಾನಿ ಬ್ಲಡ್ ಮತ್ತು ಸೋದರಿ ಎಲಿಜಾ ತಮ್ಮ ಕೌಟುಂಬಿಕ ಜೀವನಗಳಲ್ಲಿ ಅಸಹ್ಯವಾದ ನೋವನ್ನನುಭವಿಸುತ್ತಿದ್ದಾಗ ಇಬ್ಬರಿಗೂ ಗಂಡಂದಿರನ್ನು ತೊರೆದು ಬಾಳಲು ಸಹಾಯ ಮಾಡಿದಳು. ಹಾಗೆ ಮಾಡಹೋದಾಗ ಅವಳಿಗೆ ಬಾಡಿಗೆ ಮನೆ ಸಿಗುವುದರಲಿ, ಒಂದು ಹೋಟೆಲಿನಲ್ಲಿ ಕೋಣೆ ಸಹ ದೊರೆಯದ ದುಸ್ಥಿತಿ ಅಂದಿನ ಇಂಗ್ಲೆಂಡಿನ ಚಿತ್ರದ ಒಂದು ಭಾಗ.

1786ರಲ್ಲಿ ಐರ್ಲೆಂಡಿನ ಒಂದು ಶ್ರೀಮಂತ ಕುಟುಂಬದ ಮೂರು ಹೆಣ್ಣು ಮಕ್ಕಳಿಗೆ ಖಾಸಗಿ ಮೇಲ್ವಿಚಾರಕಳಾಗಿ ನೇಮಕಗೊಂಡ ಮೇರಿ "ಅವಿಧೇಯತೆ" ಕಾರಣದಿಂದ ಕೆಲಸದಿಂದ ವಜಾ ಆಗಲು ಬಹಳ ದಿನಗಳೇನೂ ಬೇಕಾಗಲಿಲ್ಲ ! ಮಾರ್ಚ್ 1793ರಲ್ಲಿ ಗಿಲ್ಬರ್ಟ್ ಇಮ್ಲೆಯನ್ನು ಆಕೆ ಸಂಧಿಸಿದ್ದು ಫ್ರಾನ್ಸಿನಲ್ಲಿ 1794ರ ಮೇ ತಿಂಗಳಲ್ಲಿ ಮಗಳು ಫ್ಯಾನಿಯ ಜನನ. ತಾಯಿಯಾದಾಗ ಮೇರಿ ಇನ್ನು ಅವಿವಾಹಿತೆ. ಇಮ್ಲೆಯನೆಂದೂ ಅವಳು ಮದುವೆಯಾಗಲೇ ಇಲ್ಲ. ಸ್ಕಾಂಡಿನೇವಿಯಾದಲ್ಲಿ ವ್ಯಾಪಾರಕ್ಕೆ ಸಂಬಂಧಿಸಿದಂತೆ ಇಮ್ಲೆಯ ಪ್ರತಿನಿಧಿಯಾಗಿ ತನ್ನ ಪುಟ್ಟ ಮಗಳನ್ನು ಕಟ್ಟಿಕೊಂಡು ಸುಮಾರು ತಿಂಗಳುಗಳ ಕಾಲ ಸಂಚಾರ ಮಾಡಿ ಕಡೆಗೆ ಇಂಗ್ಲೆಂಡಿಗೆ ಹಿಂದಿರುಗಿದಳು. 1797ರ ಮಾರ್ಚ್‌ನಲ್ಲಿ ವಿಲಿಯಂ ಗಾಡ್ವಿನ್ನನನ್ನು ಮದುವೆಯಾದ ಮೇರಿ ಅದೇ ವರ್ಷದ ಆಗಸ್ಟ್‌ನಲ್ಲಿ ಮಗಳಿಗೆ ಜನ್ಮ ನೀಡಿದಳು. ಪ್ರಸವವು ಸುಗಮವಾಯಿತಾದರೂ ಆಮೇಲೆ ಉಲ್ಬಣವಾದ ಒಂದು ಜಟಿಲತೆಯಿಂದ ಹನ್ನೆರಡನೆಯ ದಿನ ಅಸು ನೀಗಿದಳು. ಮಗುವಿಗೆ ಪುತ್ತ್ರ ಮೇರಿ ಎಂಬ ನಾಮಕರಣ ಮಾಡಿದ್ದು ವಿಲಿಯಂ ಗಾಡ್ವಿನ್.

"ಗಂಡಸನ್ನು ನನ್ನ ಸಹಭಾಗಿಯೆಂದು ಪ್ರೀತಿಸುತ್ತೇನೆ ಆದರೆ ಅವನ ಭರ್ಜಿಯ ತಿವಿತವನ್ನು ನನ್ನ ಬಳಿ ಸಾರಗೊಡುವುದಿಲ್ಲ," ಎಂದು "ಮಹಿಳಾ ಹಕ್ಕಿನ ಸಮರ್ಥನೆ" ಎಂಬ ತನ್ನೊಂದು ಕೃತಿಯಲ್ಲಿ 1791ರಲ್ಲೇ ಘೋಷಿಸಿದ್ದ ಮೇರಿ ಮುಖ್ಯವಾಗಿ ಖಾಸಗಿ ಆಸ್ತಿಯು ಹೇಗೆ ಮಾನವನ ವಿಶೇಷವಾಗಿ ಮಹಿಳೆಯ, ದಾಸ್ಯಕ್ಕೆ ಕಾರಣವಾಗಿದೆಯೆಂಬುದನ್ನು ತನ್ನ ಅನೇಕ ಕೃತಿಗಳಲ್ಲಿ ಪ್ರತಿಪಾದಿಸಿದ್ದಾಳೆ. "ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಕೆಲವೊಂದು ಅನಿಸಿಕೆಗಳು," "ಮಾನವನ ಹಕ್ಕುಗಳ ಸಮರ್ಥನೆ", "ಮಹಿಳೆಯ ಹಕ್ಕುಗಳ ಸಮರ್ಥನೆ", "ಶಿಶುಪಾಲನೆಯನ್ನು ಕುರಿತ ಪತ್ರಗಳು", "ಮಹಿಳೆಯ ಹಕ್ಕುಗಳು", "ಪ್ರಕೃತಿ ಸೌಂದರ್ಯದ ಆರಾಧನೆ ಹಾಗೂ ಕಾವ್ಯ", "ಮೇರಿ— ಒಂದು ಕಾದಂಬರಿ", "ಮಹಿಳೆಗಾಗಿರುವ ಅನ್ಯಾಯ ಅಥವಾ ಮರಿಯಾ" (ಕಾದಂಬರಿ), ಇವು ಈಕೆಯ ಹಲವು ಬರಹಗಳಲ್ಲಿ ಕೆಲವು ಪ್ರಮುಖವಾದವು.

● ಡಾ|| ಜಿ. ರಾಮಕೃಷ್ಣ

ಈ ಕೃತಿಗಳನ್ನೆಲ್ಲಾ ಪರಿಚಯಿಸುವುದಾಗಲಿ ವಿಮರ್ಶಿಸುವುದಾಗಲಿ ಈ ಲೇಖನದ ವ್ಯಾಪ್ತಿಗೆ ಹೊರತಾದದ್ದು. ಪುರೋಗಾಮಿ ತತ್ವಗಳನ್ನೆಲ್ಲಾ ಖಂಡಿಸುವುದೇ ತನ್ನ ಪರಮೋದ್ದೇಶವನ್ನಾಗಿರಿಸಿಕೊಂಡಿದ್ದ ಅಂದಿನ ಒಂದು ನಿಯತಕಾಲಿಕದ ಹೆಸರು "ಜಾಕೊಬಿನ್ನರ ವಿರೋಧಿ ವಿಮರ್ಶೆ" ಎಂದು. ಆ ನಿಯತಕಾಲಿಕದ ಪ್ರತಿಯೊಂದು ಸಂಚಿಕೆಯಲ್ಲೂ ಮೇರಿಯ ವಿರುದ್ಧ ವಿಷ ಕಾರಲಾಗುತ್ತಿತ್ತು, ಅವಳ ಜೀವನ-ಹೋರಾಟಗಳನ್ನು ಲೇವಡಿ ಮಾಡಲು ವ್ಯಂಗ್ಯ ಕವನಗಳನ್ನು ಪ್ರಕಟಿಸಲಾಗುತ್ತಿತ್ತು, ಅವಳ ಕೃತಿಗಳನ್ನು ಸಂಪೂರ್ಣವಾಗಿ ಖಂಡಿಸಲಾಗುತ್ತಿತ್ತು, ಅವಳ ಸ್ನೇಹಿತರು ಮತ್ತು ಹಿತೈಷಿಗಳನ್ನು ವಾಚಾಮಗೋಚರವಾಗಿ ಬಯ್ಯಲಾಗುತ್ತಿತ್ತು. ಅವಳ ಪ್ರತಿಭೆ, ಪುರೋಗಾಮಿತ್ವ ಹಾಗೂ ಪ್ರಾಮುಖ್ಯತೆಗೆ ಇದೂ ಒಂದು ದೊಡ್ಡ ಕುರುಹು ಎನ್ನಲು ಅಡ್ಡಿಯಿಲ್ಲ.

ಅವಳ ಕೃತಿಗಳನ್ನೂ ಅವಳನ್ನು ಮೆಚ್ಚಿದವರಲ್ಲಿ ವರ್ಡ್ಸ್‌ವರ್ತ್, ಕೋಲರಿಜ್, ಸದೆ, ಬ್ಲೇಕ್ ಇತ್ಯಾದಿಗಳನ್ನು ಬರೆದುಕೊಟ್ಟ. ಕ್ರೈಸ್ತ ಧರ್ಮವನ್ನು ತ್ಯಜಿಸಿ ಧರ್ಮರಹಿತಳಾಗಿ ಜೀವನ ನಡೆಸಿದ ಈಕೆಯ ಅನೇಕಾನೇಕ ಹೋರಾಟಗಳು ಅವಳನ್ನು ತನ್ನ ಶತಮಾನದಲ್ಲಿ ಅತ್ಯಂತ

ಕ್ರಾಂತಿಕಾರಿಯ ಸ್ಥಾನಕ್ಕೆ ಒಯ್ಯುತ್ತವೆ. ಅವಳ ಪ್ರಭಾವದ ಶಾಖದಿಂದ ಆ ಶತಮಾನದಲ್ಲಿ ಅವಳನ್ನು ಜರಿದವರು ಅಸಂಖ್ಯಾಂತರೆಂಬುದು ಸಹಜವಾಗಿದೆ. ಆದರೆ ಅವಳ ಸ್ಥಾನ ಇನ್ನೂ ಅಳಿಸಿಲ್ಲವಲ್ಲಾ ಎಂದು ಬೊಬ್ಬೆ ಹಾಕುವವರು ಇಂದಿಗೂ ಉಳಿದಿದ್ದಾರೆಂಬುದು ಆಶ್ಚರ್ಯಕರ. ಅವಳ ಕೃತಿಗಳ ಚಿಂತನೆ ಮತ್ತು ಪ್ರಖರತೆ ಅಷ್ಟು ಬಲವಾಗಿದೆ. 1947ರಷ್ಟು ಈಚೆಗೆ ಬಂದ ಒಂದು ಪುಸ್ತಕದಲ್ಲಿ ಅವಳನ್ನು ತೆಗಳಿರುವುದು ಹೀಗೆ: "The mentally sick originatar of the disease of feminism."— ಹಾಗೆ ನೋಡಿದರೆ ಅದು ತೆಗಳಿಕೆಯಲ್ಲ, ನಿಜಕ್ಕೂ ಅದು ಮೇರಿಯ ಹೆಗ್ಗಳಿಕೆ.

O

ತ್ರಿವೇಣಿ ನೆನಪು

ಕನ್ನಡ ಕಾದಂಬರಿ ಲೋಕದಲ್ಲಿ ಮಿನುಗು ತಾರೆಯಾಗಿ ಮೆರೆದ ತ್ರಿವೇಣಿ ಗತಿಸಿ ಇಪ್ಪತ್ತೈದು ವರ್ಷಗಳು ಸಂದಿವೆ. ಅವರು ತಮ್ಮ ಜೀವನದ ಅಲ್ಪಾವಧಿಯಲ್ಲಿ ರಚಿಸಿದ ಕಾದಂಬರಿಗಳು ಅವುಗಳ ವಸ್ತು, ವಿಶಿಷ್ಟತೆಯಿಂದಾಗಿ ಇಂದಿಗೂ ಪ್ರಸ್ತುತವೆನಿಸಿವೆ. ಇಂದಿನ ನಮ್ಮ ಸಮಕಾಲೀನ ಸಾಹಿತ್ಯ ಸಂದರ್ಭದಲ್ಲಿ ತ್ರಿವೇಣಿಯವರ ಕೃತಿಗಳ ಪುನರ್ಮೌಲ್ಯೀಕರಣ ಮಾಡುವ ಉದ್ದೇಶದಿಂದ ಜಾಗೃತಿ ಮಹಿಳಾ ಅಧ್ಯಯನ ಕೇಂದ್ರವು ಅಂತರ ರಾಷ್ಟ್ರೀಯ ಮಹಿಳಾ ದಿನದ ಸಲುವಾಗಿ ಮಾರ್ಚ್ 11 ಮಧ್ಯಾಹ್ನ 3 ಗಂಟೆಗೆ ನಂಜನಗೂಡು ತಿರುಮಲಾಂಬ ಸಭಾಂಗಣದಲ್ಲಿ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿದೆ. ತ್ರಿವೇಣಿಯವರ ಕೃತಿಗಳನ್ನು ಕುರಿತ ಲೇಖನಗಳನ್ನು ಸಂಕಲನ 'ತ್ರಿವೇಣಿ'ಯನ್ನು ಕನ್ನಡದ ಪ್ರಮುಖ ಸಾಹಿತಿಗಳಲ್ಲೊಬ್ಬರಾದ ಶ್ರೀ ಚದುರಂಗರು ಬಿಡುಗಡೆ ಮಾಡುತ್ತಾರೆ. ಈ ಸಂಕನದಲ್ಲಿ ಶ್ರೀಮತಿಯರಾದ ಗೀತಾ ಪಿ. ಎಸ್, ಡಾ॥ ಸುಮಿತ್ರಾಬಾಯಿ ಬಿ. ಕೆ, ಡಾ॥ ವಿಜಯಾದಬ್ಬೆ ಮತ್ತು ಶ್ರೀಯುತರಾದ ಕೆ. ಸತ್ಯನಾರಾಯಣ, ಎಸ್. ಎನ್. ಶಂಕರ್ ಹಾಗೂ ಡಾ॥ ಎಸ್. ಆರ್. ಚಂದ್ರಶೇಖರ್ ರವರ ಲೇಖನಗಳು ಸೇರಿವೆ. ಸಕಾಲದಲ್ಲಿ ಲೇಖನ ಒದಗಿಸಿ ಸಹಕರಿಸಿದ ಈ ಲೇಖಕ ಬಂಧುಗಳಿಗೆಲ್ಲಾ ಕೃತಜ್ಞತೆಗಳು.

ಜಾಗೃತಿ ಪ್ರಕಾಶನದ ಮೊದಲ ಕೃತಿ 'ತ್ರಿವೇಣಿ' ಕೃತಿಯ ಬಿಡುಗಡೆಯ ಸಂದರ್ಭದಲ್ಲಿ ತ್ರಿವೇಣಿ ಸಾಹಿತ್ಯದ ವಿಚಾರ ಸಂಕಿರಣವನ್ನೂ ಏರ್ಪಡಿಸಲಾಗಿದೆ. ಶ್ರೀ ಎಚ್. ಎಂ. ಕೃಷ್ಣಯ್ಯನವರು ನಿರ್ವಹಿಸುವ ಈ ಕಾರ್ಯಕ್ರಮದಲ್ಲಿ ಶ್ರೀಮತಿ ಗೀತಾ ಪಿ.ಎಸ್, ಡಾ॥ ಕೆ. ವಿ. ನಾರಾಯಣ್, ಶ್ರೀಮತಿ ಜ್ಯೋತ್ಸ್ನಾ ಕಾಮತ್ ಹಾಗೂ ಶ್ರೀ ಎಂ.ವಿ. ಕೃಷ್ಣಸ್ವಾಮಿ, ಮುಂತಾದವರು ತ್ರಿವೇಣಿ ಸಾಹಿತ್ಯದ ವಿವಿಧ ಮುಖಗಳನ್ನು ಕುರಿತಂತೆ ಮಾತನಾಡುತ್ತಾರೆ.

ಈ ಹುಡುಗಿಯರು

ಈ ಹುಡುಗಿಯರನ್ನು ಕಂಡರೆ
ಖುಷಿಯಾಗುತ್ತದೆ
ದಿಟ್ಟೆಯರು ಇವರು !
ಸಮಾಧಿಯೊಳಗಿದ್ದ ಮೌನಕ್ಕೆ
ಉಸಿರು ತುಂಬಿಸುತ್ತಾರೆ
ಹಾವಾಗುತ್ತಾರೆ ಹಕ್ಕಿಯಾಗುತ್ತಾರೆ.

ಈ ಹುಡುಗಿಯರನ್ನು ಕಂಡರೆ
ಅಸೂಯೆಯಾಗುತ್ತದೆ
ನನ್ನ, ನನ್ನಜ್ಜಿಯರ ಮಾತುಗಳನ್ನೆಲ್ಲಾ
ಇವರು ಕದ್ದುಬಿಟ್ಟಿದ್ದಾರೆ
ಮಾನಿನಿ ಎನ್ನುವ ಶಬ್ದಕ್ಕೆ
ಅಪವಾದವಾಗಿದ್ದಾರೆ
ನನಗೆ ಅಸಾಧ್ಯವಾದದ್ದೆಲ್ಲಾ
ಇವರಿಗೆ ಸಾಧ್ಯ ! !

ಈ ಹುಡುಗಿಯರನ್ನು ಕಂಡು
ಹೆದರುತ್ತೇನೆ
ಗಂಡನ್ನೂ, ವ್ಯವಸ್ಥೆಯನ್ನೂ ಒಟ್ಟಿಗೇ
ಬೆಚ್ಚಿ ಬೀಳಿಸುತ್ತಾರೆ.
ಷಂಡರ ಒಣ ಪೌರುಷವನ್ನು ಬೀದಿ
ಬೀದಿಗಳಲ್ಲಿ ಹಾಡು ಹಗಲೇ
ಹಾಡಿಬಿಡುತ್ತಾರೆ.

ಈ ಹುಡುಗಿಯರನ್ನು ಕಂಡರೆ
ಹೇಸಿಗೆಯಾಗುತ್ತದೆ
ಬುದ್ಧಿಜೀವಿಗಳೆಂಬ ಹಣೆಪಟ್ಟಿ
ಕಟ್ಟಿಕೊಂಡು
ಮನಸ್ಸು, ಮೆದುಳುಗಳಲ್ಲಿ ಮಾತ್ರ
ಮೆರೆಯುತ್ತಾರೆ
ಒಳಗೊಳಗೇ ಹೆಣ್ತನವನ್ನು
ಮಾರಿಕೊಳ್ಳುತ್ತಾರೆ

ಈ ಹುಡುಗಿಯರಿಗೆ ಧಿಕ್ಕಾರ
ಹಾಕುತ್ತೇನೆ
ಸಮಾನತೆ ಎನ್ನುತ್ತಲೇ ಗಂಡಿನ
ಲಂಪಟತನವನ್ನು ಪೋಷಿಸುತ್ತಾರೆ
ಹೊಸತು ಮಾಡಲು ಹೋಗಿ
ಹಳೆಯ ಹೆಂಡತಿಯಾಗುತ್ತಾರೆ
ಗಂಡುಳ್ಳ ಗರತಿಯರ ಗಂಡನ
ಬಾಳಿಗೆ ಲಗ್ಗೆಯಿಕ್ಕುತ್ತಾರೆ

ಈ ಹುಡುಗಿಯರನ್ನು ಕಂಡು
ಬೇಸರ, ಕನಿಕರ ನನಗೆ
ಮುದ್ದು ಮಕ್ಕಳ ಅಪ್ಸಂದಿರನ್ನು
ಏಕೆ ಕಸಿಯುತ್ತಾರಿವರು ?
ತಮ್ಮನ್ನು ತಾವೇ ವಂಚಿಸಿಕೊಳ್ಳುತ್ತಾರೆ
ಏಕೆ ? ?
ಎತ್ತರಕ್ಕೆ ನೆಗೆದ ಇವರು
ಮತ್ತೇಕೆ ಕೇವಲ
ಬಿಂದುಗಳಾಗಿ ಹೋಗುತ್ತಾರೆ ? ? ?

● ಶಾಂತಾ ನಾಗರಾಜ್

ಅತ್ಯಾಚಾರಿಯ ಪತ್ತೆಗೆ ಡಿ.ಎನ್.ಎ. ಬೆರಳಚ್ಚು ತಂತ್ರ

1986, ಅಮೆರಿಕೆಯ ಆರ್‌ಲಾಂಡೋ ನಗರದಲ್ಲಿ ಒಂದೇ ಬಗೆಯ ಸುಮಾರು ಇಪ್ಪತ್ತಮೂರು ಅತ್ಯಾಚಾರದ ಕೇಸುಗಳು ಪೊಲೀಸರಲ್ಲಿ ದಾಖಲಾದವು. ಮನೆಯಲ್ಲಿ ಹೆಂಗಸರು ಒಂಟಿ ಇದ್ದ ಸಮಯ ನೋಡಿ, ಕಿಟಕಿ ಮುರಿದು ಒಳಹೊಕ್ಕು ತಟ್ಟನೆ ಮೇಲೆರಗಿ ಪದೇ ಪದೇ ಬಲಾತ್ಕರಿಸಿದ ಅತ್ಯಾಚಾರಿ ಭಾರೀ ಜಾಗರೂಕ ಮನುಷ್ಯನಾಗಿ ಕಂಡ. ಬಹಳಷ್ಟು ಕಾಲ ಆತ ತಾನು ಕಣ್ಣು ಹಾಕಿದ ಹೆಂಗಸರ ಓಡಾಟ, ಮನೆಯವರು ಬಂದು–ಹೋಗುವ ಸಮಯ ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿ, ಸರಿಯಾದ ಹೊತ್ತಿನಲ್ಲಿ ಬಂದು ಎರಗುತ್ತಿದ್ದ. ಮೇಲೆ ಬಿದ್ದವನೇ ಮುಖವನ್ನು ಬಟ್ಟೆಯಿಂದ ಕಟ್ಟಿ ಮುಚ್ಚುತ್ತಿದ್ದ. ತನ್ನ ಕೆಲಸ ಮುಗಿದ ಮೇಲೆ ಎಲ್ಲೂ ತನ್ನ ಬೆರಳಚ್ಚು ಉಳಿಯದಂತೆ ಸ್ವಚ್ಛವಾಗಿ ಬಟ್ಟೆಯಿಂದ ಒರೆಸಿ ಮರೆಯಾಗುತ್ತಿದ್ದ ಜೊತೆಗೇ ತನ್ನ ವೀರ್ಯವನ್ನು ಜೊಕ್ಕಟಗೊಳಿಸಿ ಹೋಗುತ್ತಿದ್ದ. ಇಪ್ಪತ್ತಮೂರೂ ಅತ್ಯಾಚಾರದ ಕೇಸುಗಳನ್ನು ಗಮನಿಸಿದಾಗ, ಅವೆಲ್ಲ ಏಕ ವ್ಯಕ್ತಿಯ ಕೃತ್ಯವಾಗಿ ಕಂಡಿತು.

1987ರ ಫೆಬ್ರವರಿಯಂದು 27 ವರ್ಷದ ಹೋಡ್ಗೆ ಎಂಬ ಹೆಂಗಸಿನ ಮೇಲೆ ಇಂಥದೇ ಅತ್ಯಾಚಾರವಾಯಿತು. ಬೆಳಗಿನ ಹೊತ್ತು, ಆಕೆಯ ಮಕ್ಕಳಿಬ್ಬರೂ ಪಕ್ಕದ ಕೊಠಡಿಯಲ್ಲಿ ಮಲಗಿದ್ದರು. ಆದರೆ ಈ ಬಾರಿ ಆತ ಕೊಂಚ ಅಜಾಗರೂಕನಾಗಿದ್ದ. ಕಿಟಕಿಯ ಮೇಲೆ ಆತ ಬೆರಳಚ್ಚು ಬಿಟ್ಟುಹೋಗಿದ್ದ. ಆತನ ವೀರ್ಯದ ಮಾದರಿಯೂ ದೊರೆತು, ಅದನ್ನು ಪರೀಕ್ಷೆಗೆ ಕಳುಹಿಸಲಾಯಿತು. ಅದೇ ವರ್ಷ ಮಾರ್ಚ್ ತಿಂಗಳಿನಲ್ಲಿ, ಕ್ಯಾಡಲ್‌ವಿಕ್ ರಸ್ತೆಯ ಮಹಿಳೆಯೊಬ್ಬಳು ಅಪರಿಚಿತ ಯುವಕನೊಬ್ಬ ತನ್ನ ಮನೆಯನ್ನೇ ಗಮನಿಸುತ್ತಿರುವ ಬಗ್ಗೆ ಪೊಲೀಸಿಗೆ ದೂರು ಕೊಟ್ಟಳು. ಈ ಬಾರಿ ಪೋಲೀಸರು ಹಿಡಿದದ್ದು ಟಾಮಿ ಲೀ ಆಂಡ್ರೂ ಎಂಬ ಯುವಕನನ್ನು. ಮರುದಿನ ಅವನ ಚಿತ್ರವನ್ನು ಆತನಿಗೆ ಬಲಿಯಾದ ಕೆಲವು ಮಹಿಳೆಯರಿಗೆ ತೋರಿಸಿದಾಗ ಅವರೆಲ್ಲರೂ ತಕ್ಷಣ ಗುರುತಿಸಿದರು. ಆದರೂ ಆಂಡ್ರೂವಿನ ವಿರುದ್ಧ ಕೇಸು ಕಟ್ಟುವುದು ಸುಲಭವಿರಲಿಲ್ಲ. ದೋಷಿ ಬಟ್ಟೆಯಿಂದ ಬಲಿಯಾಗುವ ಹೆಂಗಸರ ಕಣ್ಣು ಕಟ್ಟುವುದನ್ನು ಎಂದೂ ಮರೆತವನಲ್ಲ. ಕಣ್ಣು ಕಟ್ಟುವ ಮೊದಲು ಹೋಡ್ಗೆ ಆತನನ್ನು ನೋಡಿದ್ದು ಕೇವಲ ಆರು ಸೆಕೆಂಡುಗಳು ಮಾತ್ರ. ಆರು ಸೆಕೆಂಡುಗಳು ಹೋಡ್ಗೆಗೆ ಅನಂತವಾಗಿ ಕಂಡಿದ್ದರೂ, ಆರು ಸೆಕೆಂಡುಗಳ ಕಾಲ ಮಿಂಚಿ ಮರೆಯಾದ ಮುಖವನ್ನು ಅವಳು ಸರಿಯಾಗಿ ಗುರುತಿಸಿದಳು ಎಂದು ನ್ಯಾಯಾಲಯ ನಂಬಲು ಸಿದ್ಧವಿರಲಿಲ್ಲ. ವೀರ್ಯವನ್ನು ಪರೀಕ್ಷಿಸಿ, ಆರೋಪಿಯ ರಕ್ತಕ್ಕೆ ಹೋಲಿಸುವ ಸಾಮಾನ್ಯ ಪರೀಕ್ಷೆ ಕೂಡ ಆರೋಪಿ ದೋಷಿಯಾಗಿರಬಹುದು ಎಂದು ನಿಖರವಾಗಿ ತಿಳಿಸಲಾರದು. ಆ ಪರೀಕ್ಷೆಗಳೇನೋ ಆಂಡ್ರೂ ದೋಷಿಯಾಗಿರುವ ಸಾಧ್ಯತೆಯು ಹೇಳಿದರೂ, ಅಮೆರಿಕೆಯ ಶೇಕಡ ಮೂವತ್ತರಷ್ಟು ಗಂಡಸರ ರಕ್ತದ ಮಾದರಿಯೂ ಆ ವೀರ್ಯದ ಮಾದರಿಗೆ ಹೊಂದುವಂಥದ್ದೇ. ಸರಿಯಾದ ಫರೆನ್ಸಿಕ್ ಪರೀಕ್ಷೆಗಳಿಲ್ಲದೆ, ಪೂರ್ಣ ಸಮರ್ಥನೆಗಳ ಅಭಾವದಿಂದ ದೋಷಿ ಕಾನೂನಿನ ಜರಡಿಯಲ್ಲಿ ಜಾರಿಹೋಗಲಿದ್ದ. ಆದರೆ ದೂರದರ್ಶನದ ವಾರ್ತೆಯೊಂದು 43 ವರ್ಷದ ಪ್ರಾಸೆಕ್ಯೂಟರ್ ಟಿಮ್ ಬೆರ್ರಿಯ ಗಮನ ಸೆಳೆಯಿತು. ಡಿ.ಎನ್.ಎ. ಬೆರಳಚ್ಚಿನ ನವೀನ ತಂತ್ರವೊಂದನ್ನು ಕಂಡು ಹಿಡಿಯಲಾಗಿದ್ದು, ಈ ತಂತ್ರ ಬ್ರಿಟನ್ನಿನಲ್ಲಿ ಮಾನಭಂಗದ ಕೇಸುಗಳಿಗೆ ಬಹಳ ಸಹಾಯಕಾರಿಯಾಗಿತ್ತು. ಈ ಹೊಸ ತಂತ್ರ ಸಾವಿರಾರು ಜನರ ತಲಾಶಿ ಮಾಡಿ ನಿಖರವಾಗಿ ದೋಷಿಯನ್ನು ಪತ್ತೆ ಹಚ್ಚಿದುದಲ್ಲದೆ, ನಿರಪರಾಧಿಯಾದ ಆರೋಪಿಯನ್ನು ಬಿಡುಗಡೆ ಮಾಡಿತ್ತು.

ಟಿಮ್ ಬೆರ್ರಿ 'ಫರೆನ್ಸಿಕ್ ಮತ್ತು ಪಿತೃತ್ವ ಪರೀಕ್ಷೆಗಳ ನಿರ್ದೇಶಕನನ್ನು ಭೇಟಿ ಮಾಡಿ ಆಂಡ್ರೂವಿನ ಕೇಸಿಗೆ ಈ ಹೊಸ ತಂತ್ರವನ್ನು ಬಳಸಲು ಬಯಸಿದ. ಆತ ಇದೀಗ ಹೊಚ್ಚ ಹೊಸ ತಂತ್ರವನ್ನು ಅಮೆರಿಕೆಯಲ್ಲಿ ಮೊಟ್ಟ ಮೊದಲಿಗೆ ಉಪಯೋಗಿಸ ಹೊರಟಿದ್ದ, ಹೀಗಾಗಿ ಜೆನಿಟಿಕ್ಸ್ ಕುರಿತು ತೀವ್ರತನದ ಅಧ್ಯಯನ ಮಾಡಿದ.

ಡಿ.ಎನ್.ಎ. ನಮ್ಮ ವಂಶವಾಹಿನಿಯ ನಕ್ಷೆ, ನಮ್ಮ

ದೇಹದ ಪ್ರತಿ ಜೀವಕೋಶದಲ್ಲೂ ದೊರೆಯುವಂಥಹುದು. ಡಿ.ಎನ್.ಎ. 43 ವರ್ಣತಂತುಗಳನ್ನು ಹೊಂದಿದೆ. ಇದರಲ್ಲಿ 23 ತಂದೆಯ ವೀರ್ಯದಿಂದ ದೊರೆಯುವಂಥಹವು. ಉಳಿದ23 ತಾಯಿಯ ಅಂಡಾಶಯದಿಂದ ಬಂದಂಥಹವು. ಡಿ.ಎನ್.ಎ. ಬೆರಳಚ್ಚಿನ ಈ ಹೊಸ ಪರೀಕ್ಷೆಯನ್ನು ದೇಹದ ಯಾವುದೇ ಜೀವಕೋಶದ ಮೇಲೂ ಮಾಡಬಹುದು—ಅದು ವೀರ್ಯವಾಗಲೀ, ರಕ್ತವಾಗಲಿ, ಕೂದಲಿನ ಮಾದರಿಯಾಗಲಿ, ಇಲ್ಲ ಚರ್ಮದ ಮಾದರಿಯಾದರೂ ಸರಿ. ಈ ಪರೀಕ್ಷೆಯ ಮೂಲಕ ವ್ಯಕ್ತಿಯನ್ನು ನಿಖರವಾಗಿ ಗುರುತಿಸಬಹುದಾಗಿದೆ. ಓರ್ವ ವ್ಯಕ್ತಿಯ ಎಲ್ಲ ಜೀವ ಕೋಶದಲ್ಲೂ, ಆ ವ್ಯಕ್ತಿಗೆ ವಿಶಿಷ್ಟವಾದ ಮುದ್ರೆ ಇದೆ. ಈ ವಂಶವಾಹಿನಿಯ ಮುದ್ರೆ ವ್ಯಕ್ತಿಯಿಂದ ವ್ಯಕ್ತಿಗೆ ಬೇರೆ ಇದ್ದು, ವ್ಯಕ್ತಿಯ ಗುರುತನ್ನು ಪತ್ತೆ ಹಚ್ಚಬಲ್ಲದು.

ಡಿ.ಎನ್.ಎ. ತೆಳ್ಳನೆಯ ಎರಡೆಳೆಯ ಸುರುಳಿಯಂತೆ ಕಾಣಿಸುತ್ತದೆ. ಡಿ.ಎನ್.ಎ.ಯ ಎರಡೂ ಎಳೆಯನ್ನು, ಏಣಿಯ ಕಾಲುಗಳು ಹಿಡಿದಿಡುವಂತೆ, ನಾಲ್ಕು ರಸಾಯನಿಕ ತುಂಡುಗಳು ಹಿಡಿದಿಟ್ಟಿವೆ. ಈ ರಸಾಯನಿಕ ತುಣುಕುಗಳಲ್ಲಿ ಅಸಂಖ್ಯಾತ ಮಾಹಿತಿಯಿದ್ದು, ಮನುಷ್ಯನ ಪ್ರತಿ ಅಂಗರಚನೆಯೂ ಈ ರಸಾಯನಿಕ ತುಣುಕುಗಳು ಹೇಳಿದಂತೆ ರೂಪುಗೊಳ್ಳುತ್ತದೆ. ಡಿ.ಎನ್.ಎ.ಯ ಹೆಚ್ಚು ಭಾಗ ಎಲ್ಲ ಮನುಷ್ಯರಿಗೂ ಒಂದೇ ಬಗೆಯಾಗಿರುತ್ತದೆ.—ಎಲ್ಲರಿಗೂ ಎರಡು ಕೈ, ಎರಡು ಕಾಲು, ಎರಡು ಕಣ್ಣು ಇರಲು ಇದೇ ಕಾರಣ. ಆದರೆ ಡಿ.ಎನ್.ಎ.ಯ ಕೆಲವು ಭಾಗಗಳು ವ್ಯಕ್ತಿಯಿಂದ ವ್ಯಕ್ತಿಗೆ ಬಹಳ ಭಿನ್ನವಾಗಿದ್ದು, ಈ ವಿಭಿನ್ನತೆಯೇ ವ್ಯಕ್ತಿಯನ್ನು ಗುರುತಿಸುವಲ್ಲಿ ಸಹಾಯಕವಾಗಿದೆ. ಹೀಗೆಂದೇ ಈ ಡಿ.ಎನ್.ಎ. ತಂತ್ರ ಅತ್ಯಂತ ಅದ್ಭುತದ ಫರೆನ್ಸಿಕ್ ಸಲಕರಣೆಯಾಗಿದೆ. ಇಲ್ಲಿಯವರೆಗೂ ಉಪಯೋಗಿಸುತ್ತಿದ್ದ ಜೀವರಸಾಯನಿಕ ಫರೆನ್ಸಿಕ್ ತಂತ್ರಗಳು ಅಷ್ಟು ನಿಖರವಿಲ್ಲ. ಇವನೇ ದೋಷಿ ಎಂದು ನಿಖರವಾಗಿ ಹೇಳುವ ಸಾಧ್ಯತೆಗಳಿಲ್ಲದೆ ದೋಷಿ 'ನಿರಪರಾಧಿ' ಎಂದು ಘೋಷಿತವಾಗುವುದು ಸಾಮಾನ್ಯ.

ಹೋಡ್ಗೆಯ ವೀರ್ಯದ ಪರೀಕ್ಷೆಯಲ್ಲಿ ಸಾಕಷ್ಟು ಡಿ.ಎನ್.ಎ. ಎಳೆಗಳನ್ನು ಪಡೆಯಲು ಸಾಧ್ಯವಾಗಿತ್ತು. ಆರೋಪಿ ಆಂಡ್ರೂನ ರಕ್ತದ ಮಾದರಿಯಿಂದಲೂ ಡಿ.ಎನ್.ಎ. ಎಳೆಗಳನ್ನು ತೆಗೆದುಕೊಂಡರು. ಈ ಡಿ.ಎನ್.ಎ.ಗಳ 'ನಿರ್ಬಂಧಿತ ಕಿಣ್ವ'ಗಳಿಂದ ಕತ್ತರಿಸಲಾಯಿತು. ಈ 'ಪರಮಾಣು ಕತ್ತರಿ' ಡಿ.ಎನ್.ಎ. ಎಳೆಗಳ ನಿಖರವಾದ ಅಳತೆಯ ತುಂಡುಗಳಾಗಿ ಕತ್ತರಿಸುತ್ತದೆ. ಡಿ.ಎನ್.ಎ.ಯ ಹೆಚ್ಚು ಭಾಗಗಳು ಪ್ರತಿ ವ್ಯಕ್ತಿಯಲ್ಲೂ ಒಂದೇ ಬಗೆಯಾಗಿ ಕತ್ತರಿಸಲ್ಪಡುತ್ತದೆ. ಆದರೆ 'ಜಂಪ್ ಡಿ.ಎನ್.ಎ.' ಎಂದು ಕರೆದ ಭಾಗಗಳಲ್ಲಿ ಕತ್ತರಿಸಿದ ತುಂಡುಗಳ ಅಳತೆ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತದೆ. ಈ ವಿಶಿಷ್ಟ ವ್ಯಕ್ತಿ ಸ್ವಲಕ್ಷಣದ ತುಂಡು ಮಾದರಿಗಳನ್ನು ಛಾಯಾ ಚಿತ್ರ ಪಟಲದ ಮೇಲೆ ಹಿಡಿದು, ಹೋಲಿಸಿ ನೋಡಬಹುದು.

ಅಕ್ಟೋಬರ್ ತಿಂಗಳಿನ ಹೊತ್ತಿಗೆ ಹೋಡ್ಗೆಯ ದೇಹದಲ್ಲಿ ದೊರೆತ ವೀರ್ಯದ ಡಿ.ಎನ್.ಎ. ಚಿತ್ರಗಳು ತಯಾರಾದವು. ಅವನ್ನು ಆರೋಪಿ ಆಂಡ್ರೂವಿನ ರಕ್ತದ ಡಿ.ಎನ್.ಎ. ಬೆರಳಚ್ಚಿಗೆ ಹೋಲಿಸಿದಾಗ, ಎರಡೂ ಸಂಪೂರ್ಣ ಹೊಂದಿಬಂದವು. ನವೆಂಬರ್ ಆರರಂದು ಆಂಡ್ರೂವನ್ನು ತಪ್ಪಿತಸ್ಥನಾಗಿ ಘೋಷಿಸಲಾಯಿತು. ಆಂಡ್ರೂವಿಗೆ 22 ವರ್ಷದ ಕಾರಾಗೃಹ ಶಿಕ್ಷೆ ವಿಧಿಸಲಾಯಿತು. ಅಮೇರಿಕೆಯಲ್ಲಿ ಡಿ.ಎನ್.ಎ. 'ಬೆರಳಚ್ಚು ತಂತ್ರ ಅಪರಾಧಿಯನ್ನು ಹಿಡಿದು ಕೊಟ್ಟದ್ದು ಇದೇ ಮೊದಲು. ಮಹಿಳೆಯರ ಮೇಲಿನ ದೌರ್ಜನ್ಯಗಳು, ಅತ್ಯಾಚಾರಗಳು ಹೆಚ್ಚುತ್ತಿರುವ ಈ ಕಾಲದಲ್ಲ ಡಿ.ಎನ್.ಎ 'ಬೆರಳಚ್ಚು ತಂತ್ರ ನ್ಯಾಯ ಬಯಸುವ ಪ್ರತಿ ವ್ಯಕ್ತಿಗೂ ವರವಾಗಿ ಮೂಡಿಬಂದಿದೆ.

—ನೇಮಿಚಂದ್ರ

4ನೇ ಪುಟದಿಂದ

ಶ್ರಾಳೆ. ಅವಳು ಬೆಳೆದ ಹಾಗೆ ಕುಟುಂಬದಲ್ಲಿ ಗಂಡು ಮಗುವಿಗೂ ತನಗೂ ಇರುವ ಅಸಮಾನತೆ ಅವಳಿಗೆ ಸ್ಪಷ್ಟವಾಗುತ್ತದೆ. ಆದರೆ ಅವಳು ದನಿಯೆತ್ತುವ ಹಾಗಿಲ್ಲ. ಶೈಕ್ಷಣಿಕ ಆಯ್ಕೆ ಅಥವಾ ಉದ್ಯೋಗ ಆಯ್ಕೆಯ ಸ್ವಾತಂತ್ರ್ಯ ಅವಳಿಗಿಲ್ಲವೇ ಇಲ್ಲ, ಅವಳ ಬದುಕಿನ ಗುರಿ ಮದುವೆಯೊಂದೇ. "ಹೆಣ್ಣಿಗೆ ತಾಯ್ತನ ಮುಖ್ಯ. ಸಂಸಾರವೇ ಅವಳ ಪ್ರಪಂಚ. ತ್ಯಾಗ ಸೇವೆಗಳಲ್ಲೇ ಅವಳ ಜೀವನ ಸಾರ್ಥಕ" ಎಂಬ ವಿಷಯಗಳನ್ನು ಚಿಕ್ಕಂದಿನಿಂದಲೇ ಅವಳ ಮನಸ್ಸಿನಲ್ಲಿ ಬೇರೂರುವಂತೆ ಮಾಡಲಾಗುತ್ತದೆ. ಮದುವೆಯ ವಯಸ್ಸಿಗೆ ಬಂದರೆ, ವಿವಾಹ ನಿಶ್ಚಯವಾಗುವ ಸಂದರ್ಭ, ಅವಳು ಅನೇಕ ಅವಮಾನ ಪ್ರಸಂಗಗಳನ್ನು ಎದುರಿಸ ಬೇಕಾಗುತ್ತದೆ. ವಿವಾಹ ಕಾಲದಲ್ಲಿ ನಡೆಯುವ 'ಕನ್ಯಾದಾನ'ದ ಕಲ್ಪನೆಯೇ ಹೆಣ್ಣಿನ ಆತ್ಮ ಗೌರವಕ್ಕೆ ಕುಂದು ತರುವಂಥದು. ಒಟ್ಟಿನಲ್ಲಿ ಹಿಂದೂ ವಿವಾಹ ಶಾಸ್ತ್ರಗಳ ಸುತ್ತ ಹೆಣೆದುಕೊಂಡಿರುವ ಸಂಪ್ರದಾಯಗಳೆಲ್ಲ ಹೆಣ್ಣಿನ ಅಸಮಾನತೆಯನ್ನು ನಿಚ್ಚಳವಾಗಿ ಪ್ರತಿಪಾದಿಸುತ್ತವೆ.

ಹೀಗೆ ಧರ್ಮ, ಜಾತಿ, ಕುಟುಂಬಗಳ ಶೋಷಣೆಯ ಜೊತೆಗೆ ಅನೇಕ ಸಾಮಾಜಿಕ ಅನಿಷ್ಟಗಳೂ ಮಹಿಳೆಯನ್ನು ಕಾಡುತ್ತಿವೆ. ಸತಿಪದ್ಧತಿ, ಹೆಣ್ಣು ಭ್ರೂಣಹತ್ಯೆ, ವರದಕ್ಷಿಣೆ, ವಧೂವಹನ, ದೇವದಾಸಿ ಪದ್ಧತಿ, ಅವುಗಳಲ್ಲಿ ಪ್ರಧಾನವಾದುವು.

ಸುಮಾರು ನೂರು ವರ್ಷಗಳ ಹಿಂದೆಯೇ ನಮ್ಮ ದೇಶದಲ್ಲಿ ಸತಿ ಪದ್ಧತಿಯನ್ನು ನಿಷೇಧಿಸಲಾಗಿತ್ತು. ಆದರೆ ಕಳೆದವರ್ಷ ದೇವರಾದಲ್ಲಿ ಅದು ಮತ್ತೆ ಮುಖ ತೋರಿಸಿ ಇಡೀ ರಾಷ್ಟ್ರ ತಲ್ಲಣಿಸುವಂತೆ ಮಾಡಿತು. ಧರ್ಮಗುರುಗಳು ಮತ್ತು ರಾಜಕೀಯ ಮುಖಂಡರು ತಮ್ಮ ಸ್ವಾರ್ಥ ಕಾರಣಗಳಿಗಾಗಿ ಈ ಪದ್ಧತಿಯನ್ನು ಎತ್ತಿ ಹಿಡಿಯುವ ಕ್ರೌರ್ಯ ತೋರಿದರು ಇಂಥ ಸನ್ನಿವೇಶಗಳಲ್ಲಿ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದರ ಜೊತೆಗೆ ವಿಚಾರವಂತರೂ ಹೃದಯವಂತರೂ ಆದ ಜನರ ನೆರವಿನಿಂದ ಈ ಅನಿಷ್ಟ ಪದ್ಧತಿಯನ್ನು ನಿರ್ಮೂಲ ಮಾಡಬೇಕು.

ಈ ಆಧುನಿಕ ಯುಗದಲ್ಲಿ ಹೆಣ್ಣು ಭ್ರೂಣಹತ್ಯೆ ಅತಿಯಾಗಿ ನಡೆಯುತ್ತಿದೆ ಎಂಬುದು ಅಚ್ಚರಿಯ ವಿಷಯ. ಅಮ್ನಿಯೋಸೆಂಟಿಸಿಸ್ ಎಂಬ ಪರೀಕ್ಷೆಯಿಂದ ಹೆಣ್ಣಿನ ಗರ್ಭದಲ್ಲಿರುವ ಭ್ರೂಣದ ಲಿಂಗಪತ್ತೆ ಸಾಧ್ಯ. ಮುಂಬಯಿಯಲ್ಲಿ ಇತ್ತೀಚೆಗೆ ನಡೆದ ಸಮೀಕ್ಷೆಯೊಂದರ ಪ್ರಕಾರ, ನಡೆದ ಸುಮಾರು 2000 ಭ್ರೂಣ ಹತ್ಯೆಗಳಲ್ಲಿ 1999 ಹೆಣ್ಣು ಭ್ರೂಣಗಳಾಗಿದ್ದುವು ಎಂದು ತಿಳಿದು ಬಂದಿದೆ. ಇದನ್ನು ಗಮನಿಸಿದರೆ ಈ ಸಮಸ್ಯೆ ಎಷ್ಟು ಬೃಹದಾಕಾರ ಎಂಬುದು ಮನದಟ್ಟಾಗುತ್ತದೆ. ವಿಪರ್ಯಾಸದ ಸಂಗತಿಯೆಂದರೆ ಈ ಲಿಂಗಪತ್ತೆ ಮಾಡುವವರೂ ಭ್ರೂಣಹತ್ಯೆ ಮಾಡುವವರೂ ಮಹಿಳಾ ಡಾಕ್ಟರುಗಳೇ. ಹೀಗೆ ಮಹಿಳೆ ಮಹಿಳೆಯನ್ನೇ ಶೋಷಿಸುವ ಸಂದರ್ಭಗಳು ಬಂದಿವೆ. ವಿಜ್ಞಾನವೂ ಮಹಿಳಾ ಶೋಷಣೆಗೆ ಇಂಬಾಗಿ ನಿಲ್ಲುವಂಥ ಪರಿಸ್ಥಿತಿ ಬಲು ಅಪಾಯಕರ.

ವರದಕ್ಷಿಣೆ ಹಾವಳಿ ಇತ್ತೀಚಿನ ವರ್ಷಗಳಲ್ಲಿ ವ್ಯಾಪಕವಾಗಿ ಬೆಳೆದಿದೆ. ಉದ್ಯೋಗ ಅಭದ್ರತೆ, ಉಲ್ಬಣಗೊಳ್ಳುತ್ತಿರುವ ಜೀವನ ವೆಚ್ಚ, ಅತಿಆಸೆ, ಜಾತಿ ವ್ಯಾಮೋಹ, ಏರುತ್ತಿರುವ ಹುಡುಗಿಯರ ಮದುವೆ ವಯಸ್ಸು, ಇವೆಲ್ಲ ಈ ಪದ್ಧತಿಗೆ ಕಾರಣಗಳಾಗಿವೆ. ಇದರ ಜೊತೆಗೆ ವಧೂದಹನಗಳೂ ವಿಪರೀತ ಸಂಖ್ಯೆಯಲ್ಲಿ ನಡೆದಿವೆ. ಇವನ್ನೆಲ್ಲ ಗಮನಿಸಿದಾಗ, ಮಹಿಳೆಯ ಮೇಲೆ ಇಂಥ ಕ್ರೌರ್ಯ ಮತ್ತು ದೌರ್ಜನ್ಯಗಳು ನಡೆಯುತ್ತಿರುವ ಈ ಸಮಾಜವನ್ನು ನಾಗರಿಕ ಸಮಾಜವೆಂದು ಕರೆಯಬಹುದೇ ಎಂದು ಅನುಮಾನ ಹುಟ್ಟುತ್ತದೆ.

ಧಾರ್ಮಿಕ ಕಾರಣಗಳಿಗಾಗಿ ಒಬ್ಬ ಮುಗ್ಧ ಹುಡುಗಿಯನ್ನು ದೇವದಾಸಿಯಾಗಿ ಬಿಡುವ ಸಂಪ್ರದಾಯ ಅತ್ಯಂತ ಬರ್ಬರವಾದದ್ದು. ಈ ಪದ್ಧತಿ ಅಳಿಸಿ ಹಾಕಲು ಸಮಾಜ ಸುಧಾರಕರು ಪಟ್ಟ ಪಾಡು ಅಷ್ಟಿಷ್ಟಲ್ಲ. ದೇವದಾಸಿ ನಿಷೇಧ ಕಾನೂನು ಜಾರಿಯಲ್ಲಿದ್ದರೂ ಹಾಡೇ ಹಗಲು ಎಲ್ಲಮ್ಮನ ಗುಡ್ಡದಲ್ಲಿ ನೂರಾರು ಜನ ಅಮಾಯಕರು ಈಗಲೂ ದೇವದಾಸಿಗಳಾಗುತ್ತಲೇ ಇದ್ದಾರೆ ಎಂಬ ವಿಪರ್ಯಾಸವನ್ನು ನಾವು ಗಮನಿಸಬೇಕು.

ಈ ಎಲ್ಲ ಅನಿಷ್ಟಗಳ ನಿವಾರಣೆ ಹೇಗೆ ಸಾಧ್ಯ ?

ಮೂಲಭೂತವಾಗಿ ಅಸಮಾನತೆಯನ್ನು ಎತ್ತಿ ಹಿಡಿಯುವ ಪಿತೃಪ್ರಧಾನ ವ್ಯವಸ್ಥೆ ಬದಲಾಗಿ, ಸಮಾಜವಾದೀ ವ್ಯವಸ್ಥೆ ಬಂದಾಗಲೇ ಸ್ತ್ರೀ ಪುರುಷರಿಬ್ಬರ ಸಮಾನತೆ ಸಾಧ್ಯ.

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು)

ಮಹಿಳಾ ಪ್ರಶ್ನೆಯ ವಿಶ್ಲೇಷಣೆಗೆ

ಮಹಿಳಾ ಚಳವಳಿಗೆ ಆಸರೆಯಾಗಿ

ಮಹಿಳಾ ಸಮಸ್ಯೆಗಳ ಚರ್ಚೆಗೆ ವೇದಿಕೆಯಾಗಿ

'ಅಚಲ'

ದ್ವೈಮಾಸಿಕ

Reg. No. MAG (5) PRB. DECL 039/86-87
BNOK-POST/PERIODICALS

To,

If undelivered please return to :
Jagruthi Mahila Adhyayana Kendra
221, IV Main Road, Vyalikaval
Bangalore-560 003.